**A**

**CCE RF/PF**
**Revised Syllabus**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ - 1**

**MARCH/APRIL 2025 EXAMINATION - 1**

**ಮಾದರಿ ಉತ್ತರಗಳು**

**MODEL ANSWERS**

**ಸಂಕೇತ ಸಂಖ್ಯೆ : 01-K** **CODE NO. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)**

**(Regular Fresh / Private Fresh)**

**ದಿನಾಂಕ : 21. 03. 2025 ]** **[ ಗರಿಷ್ಠ ಅಂಕಗಳು : 100**

**Date : 21. 03. 2025 ]** **[ Max. Marks : 100**

| | *ಪ್ರಶ್ನಾನುಸಾರ ಮೌಲ್ಯಮಾಪನ* | *ಅಂಕಗಳು* |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **6 × 1 = 6** |
| 1. | ಅನುಸ್ವಾರ ವಿಸರ್ಗಗಳನ್ನು ಹೀಗೆನ್ನುವರು<br>(ಎ) ಅನುನಾಸಿಕ (ಬಿ) ವ್ಯಂಜನ<br>(ಸಿ) ಯೋಗವಾಹ (ಡಿ) ಸ್ವರ<br>***ಉತ್ತರ :*** (ಸಿ) ಯೋಗವಾಹ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ಲೋಕದೊಳ್' ಎಂಬ ಪದದಲ್ಲಿರುವ ವಿಭಕ್ತಿ<br>(ಎ) ಪ್ರಥಮಾ (ಬಿ) ತೃತೀಯಾ<br>(ಸಿ) ಪಂಚಮೀ (ಡಿ) ಸಪ್ತಮೀ<br>**ಉತ್ತರ :** (ಡಿ) ಸಪ್ತಮೀ | |
| 3. | 'ಕಂಗೆಡು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಗಮಕ ಸಮಾಸ (ಬಿ) ದ್ವಿಗು ಸಮಾಸ<br>(ಸಿ) ಅಂಶಿ ಸಮಾಸ (ಡಿ) ಕ್ರಿಯಾ ಸಮಾಸ<br>**ಉತ್ತರ :** (ಡಿ) ಕ್ರಿಯಾ ಸಮಾಸ | |
| 4. | ಯುದ್ಧಕ್ಕೆ ಹೋಗಿರುವ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ ? ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ<br>(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ<br>(ಸಿ) ಭಾವಸೂಚಕ (ಡಿ) ಅರ್ಧವಿರಾಮ<br>**ಉತ್ತರ :** (ಬಿ) ಪ್ರಶ್ನಾರ್ಥಕ | |
| 5. | ಅನುನಾಸಿಕ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಅಜಂತ (ಬಿ) ವಿದ್ಯಾಭ್ಯಾಸ<br>(ಸಿ) ಅತ್ಯಾದರ (ಡಿ) ಸನ್ಮಾನ<br>**ಉತ್ತರ :** (ಡಿ) ಸನ್ಮಾನ | |
| 6. | 'ಜಾಣತನ' ಎಂಬುದು ಈ ವ್ಯಾಕರಣಾಂಶವಾಗಿದೆ<br>(ಎ) ತದ್ಧಿತಾಂತ ಭಾವನಾಮ (ಬಿ) ತದ್ಧಿತಾಂತ ನಾಮ<br>(ಸಿ) ತದ್ಧಿತಾಂತಾವ್ಯಯ (ಡಿ) ಕೃದಂತ ಭಾವನಾಮ<br>**ಉತ್ತರ :** (ಎ) ತದ್ಧಿತಾಂತ ಭಾವನಾಮ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 7. | ದೃಷ್ಟಿ : ದಿಟ್ಟಿ :: ತಪಸ್ವಿ : ........................<br>**ಉತ್ತರ :** ತವಸಿ | |
| 8. | ನಾನು : ಪುರುಷಾರ್ಥಕ ಸರ್ವನಾಮ :: ಯಾರು : ......................<br>**ಉತ್ತರ :** ಪ್ರಶ್ನಾರ್ಥಕ ಸರ್ವನಾಮ | |
| 9. | ಸುಮ್ಮನೆ : ಸಾಮಾನ್ಯಾರ್ಥಕಾವ್ಯಯ :: ಸರಸರನೆ : .....................<br>**ಉತ್ತರ :** ಅನುಕರಣಾವ್ಯಯ | |
| 10. | ಸಕ್ಕಾರಿ : ಸಕ್ಕರೆ :: ಕಳುವ್ಯಾರೆ : ........................<br>**ಉತ್ತರ :** ಕಳುಹಿಸಿದ್ದಾರೆ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **7 × 1 = 7** |
| 11. | ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?<br>***ಉತ್ತರ :***<br>ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿಪುಸ್ತಕ. | |
| 12. | 'ಶಿವಾನುಭವ ಶಬ್ದಕೋಶ' ಕೃತಿ ಬರೆದವರು ಯಾರು ?<br>***ಉತ್ತರ :***<br>'ಶಿವಾನುಭವ ಶಬ್ದಕೋಶ' ಕೃತಿ ಬರೆದವರು ಫ.ಗು. ಹಳಕಟ್ಟಿ. | |
| 13. | ಶಬರಿ ರಾಮಲಕ್ಷ್ಮಣರಿಗಾಗಿ ಏನನ್ನು ಸಂಗ್ರಹಿಸಿದ್ದಳು ?<br>***ಉತ್ತರ :***<br>ಶಬರಿ ರಾಮಲಕ್ಷ್ಮಣರಿಗಾಗಿ ಹೂ, ಹಣ್ಣು, ತಳಿರು, ಮಧುಪರ್ಕಗಳನ್ನು ಸಂಗ್ರಹಿಸಿದ್ದಳು. | |
| 14. | ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು ?<br>***ಉತ್ತರ :***<br>ಅಗ್ನಿಭೂತಿ ವಾಯುಭೂತಿಯರು ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆಯೇ ಅಹಂಕಾರದಿಂದ ಕೆಟ್ಟು ಹೋಗುತ್ತಾರೆ ಎಂದು ಭಾವಿಸಿ ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿದನು. | |
| 15. | ದುರ್ಯೋಧನನು ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳಿದನು ?<br>***ಉತ್ತರ :***<br>ದುರ್ಯೋಧನನು ಪಾರ್ಥಭೀಮರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳಿದನು. | |
| 16. | ಮುನಿಸುತರು ಲವನು ಕುದುರೆಯನ್ನು ಕಟ್ಟಿದ್ದನ್ನು ಕಂಡು ಹೆದರಲು ಕಾರಣವೇನು ?<br>***ಉತ್ತರ :***<br>ಮುನಿಸುತರು ಲವನು ಕುದುರೆಯನ್ನು ಕಟ್ಟಿದ್ದನ್ನು ಕಂಡು ಅರಸರು ಬಡಿವರು ಎಂದು ಹೆದರಿದರು. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ದುಡ್ಡಿನ ಪೈತ್ಯ ಅಡರಿದವರಿಗೆ ಯಾವುದು ಕ್ಷುದ್ರವಾಗಿ ಕಾಣುತ್ತದೆ ?<br>***ಉತ್ತರ :***<br>ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ. | |
| **IV.** | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :** | **10 × 2 = 20** |
| 18. | ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು ?<br>***ಉತ್ತರ :***<br>ಆಂಗ್ಲಭಾಷೆ ನಾಲ್ಕೈದು ಶತಮಾನಗಳ ಹಿಂದೆ ಯುರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲಜನತೆ ಸಾಹಸ ಜೀವಿಯಾಯಿತು. ಬುದ್ಧಿಶಾಲಿಯಾಯಿತು. ದೇಶವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದರು. ಆಂಗ್ಲಜನರ ಸಂಕಲ್ಪ, ಕೃಷಿಯ ಕಾರಣದಿಂದ ಇಂದು ಆಂಗ್ಲಭಾಷೆ ವಿಶ್ವವ್ಯಾಪಿಯಾಗಿದೆ. | |
| 19. | ಶಾನುಭೋಗರಿಗೆ ಮದಲಿಂಗನ ಕಣಿವೆಯಲ್ಲಿ ಬರುವಾಗ ಮನದಲ್ಲಿ ಮೂಡಿದ ಯೋಚನೆಗಳು ಯಾವುವು ?<br>***ಉತ್ತರ :***<br>ಒಮ್ಮೆ ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು, ದಾಟಿ ಹೋಗಬೇಕಾಗಿತ್ತು. ಕಾಡುದಾರಿ, ಆದರೂ ಬೆಳದಿಂಗಳು ಇದ್ದ ದಿನ ; ಕಣಿವೆ ಬಳಿ ಬರುವಷ್ಟರಲ್ಲಿ ರಾತ್ರಿ ಆಯಿತು. ಹಸಿವಿನ ಜೊತೆ ಭಯವೂ ಸೇರಿ ಕಾಲು ಮತ್ತಷ್ಟು ಚುರುಕಾಯಿತು. ಸ್ವಲ್ಪ ದೊಡ್ಡ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಬಹುದು ಎಂದು ಯೋಚಿಸುತ್ತಾ ಬೇಗ ಬೇಗ ನಡೆದರು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 20. | ಅರಿವನ್ನು ಕುರಿತ ವಚನಕಾರರ ದೃಷ್ಟಿಯನ್ನು ವಿವರಿಸಿ.<br>***ಉತ್ತರ :***<br>ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ, ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು. | |
| 21. | ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.<br>***ಉತ್ತರ :***<br>ಶಬರಿಯು ರಾಮಲಕ್ಷ್ಮಣರನ್ನು ನೋಡಿ ಅಚ್ಚರಿ ಪಡುತ್ತಾಳೆ. ನಂತರ ಹತ್ತಿರ ಹೋಗಿ ಮೈಮುಟ್ಟಿ, ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಾಳೆ. ಅವರ ಕೈಗಳನ್ನು ತನ್ನ ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸುತ್ತಾಳೆ. ಬನ್ನಿ ಎಂದು ಗದ್ಗದಿತ ಸ್ವರದಲ್ಲಿ ಹೇಳಿ, "ಅಯ್ಯೋ! ಇಂದು ಏನೂ ಅಣಿಯಾಗಿಲ್ಲ. ನಿನ್ನೆಯಷ್ಟೂ ಚೆನ್ನಾಗಿಲ್ಲ" ಎಂದು ಹಂಬಲಿಸುತ್ತಾಳೆ. ನಂತರ ಪ್ರೀತಿಯಿಂದ ವನಮಾಲೆ ಕೊರಳಿಗೆ ಹಾಕಿ ಹಿಗ್ಗುತ್ತಾಳೆ. ಅವರಿಗೆ ತಿನ್ನಲು ಹಣ್ಣು ನೀಡಿ, "ಇದಕ್ಕಿಂತ ರುಚಿಯಾದ ಹಣ್ಣು ಜಗತ್ತಿನಲ್ಲಿ ಇಲ್ಲ. ಇದನ್ನು ನಿಮಗಾಗಿಯೇ ತಂದಿರುವೆ" ಎಂದು ಉಪಚರಿಸುತ್ತಾಳೆ. | |
| 22. | ದ.ರಾ. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?<br>***ಉತ್ತರ :***<br>ಕವಿ ದ.ರಾ. ಬೇಂದ್ರೆಯವರು ಹಕ್ಕಿಯು ಇರುಳು ಅಳಿದು ದಿನ ಬೆಳಗುತ್ತಿರಲು, ಸುತ್ತಮುತ್ತ ಮೇಲೆ ಕೆಳಗೆ, ಮುಂದೆ ಮುಂದೆ, ಕಣ್ಣರೆಪ್ಪೆ ಮುಚ್ಚಿ ತೆಗೆಯುವ ಹೊತ್ತಿಗೆ, ಗಾವುದ ವೇಗದಲ್ಲಿ ಹಾರುತ್ತಿದೆ. ಕಾಲದ ಹಕ್ಕಿಯು ನೀಲ ಮೇಘ ಮಂಡಲವನ್ನು ತನ್ನ ಪಥವಾಗಿಸಿಕೊಂಡು, ಮುಗಿಲಿಗೆ ರೆಕ್ಕೆ ಬಂದಿವೆಯೋ ಎಂಬಂತೆ ಹಾರುತ್ತಿದೆ. ನಕ್ಷತ್ರಮಾಲೆ ಧರಿಸಿ, ಸೂರ್ಯ-ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಹಾರುತ್ತಿದೆ. ಕಾಲಪಕ್ಷಿಯು ಭೂಮ್ಯಾಕಾಶ ಒಳಗೊಂಡ ವಿಶಾಲ ವ್ಯಾಪ್ತಿಯಲ್ಲಿ ಹಾರುತ್ತಿದೆ ಎಂದು ಕವಿ ವರ್ಣಿಸಿದ್ದಾರೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 23. | ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನನು ಹೇಳಲು ಕಾರಣವೇನು ?<br>***ಉತ್ತರ :***<br>ದುರ್ಯೋಧನ ತನ್ನ ತಂದೆ ತಾಯಿಯರ ಸಲಹೆಯಂತೆ ಭೀಷ್ಮರಿಗೆ ನಮಸ್ಕರಿಸಿ ಯುದ್ಧದಲ್ಲಿ ತಾನು ಮುಂದೇನು ಮಾಡಬೇಕೆಂದು ಸಲಹೆ ಕೇಳಲು ಬಂದಾಗ ಭೀಷ್ಮರು ದುರ್ಯೋಧನನಿಗೆ ಪಾಂಡವರೊಡನೆ ಸಂಧಿ ಮಾಡಿಕೊಳ್ಳಬೇಕೆಂದು ಸಲಹೆ ನೀಡುತ್ತಾರೆ. ಆಗ ದುರ್ಯೋಧನ, "ನಾನು ನೆಲಕ್ಕಾಗಿ ಹೋರಾಡುತ್ತಿಲ್ಲ. ಪಾಂಡವರೊಡನೆ ಛಲಕ್ಕಾಗಿ ಹೋರಾಡುತ್ತಿರುವೆ. ಈ ನೆಲ ನನಗೆ ಪಾಳು ಬಿದ್ದ ನೆಲದಂತೆ. ದಿನಪಸುತ ಕರ್ಣನನ್ನು ಕೊಲ್ಲಿಸಿದ ಈ ನೆಲದ ಜೊತೆ ನಾನು ಸಹಬಾಳ್ವೆ ಮಾಡುವುದಿಲ್ಲ" ಎಂದು ಭೀಷ್ಮರಿಗೆ ಹೇಳುತ್ತಾನೆ. | |
| 24. | ಕವಯಿತ್ರಿ ಡಾ. ವಿಜಯಶ್ರೀ ಸಬರದ ಅವರು ಒಡೆಯನ ಮನೆ ಅಂಗಳದ ಪ್ರಕೃತಿಯ ಸಂಭ್ರಮವನ್ನು ಹೇಗೆ ವರ್ಣಿಸಿದ್ದಾರೆ ?<br>***ಉತ್ತರ :***<br>ಕವಯಿತ್ರಿ ಡಾ. ವಿಜಯಶ್ರೀ ಸಬರದ ಅವರು 'ವಸಂತ ಮುಖ ತೋರಲಿಲ್ಲ' ಎಂಬ ಕವನದಲ್ಲಿ ಒಡೆಯನ ಮನೆಯ ಅಂಗಳದಲ್ಲಿ ಮೈತುಂಬಿ ನಿಂತ ಮಾವಿನ ಮರಗಳಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಹೀಗೆ ಇಳೆಯಲ್ಲಿ ಕಡಲುಕ್ಕಿ ಹರಿಯುವ ಸಂಭ್ರಮ ಕಾಣುತ್ತಿದೆ ಎಂದು ವರ್ಣಿಸಿದ್ದಾರೆ. | |
| 25. | ವಿವೇಕಾನಂದರು ದೇಶದ ಪ್ರಗತಿ ಹೇಗೆ ಸ್ಥಿರವಾಗುವುದು ಎಂದು ವಿವರಿಸಿದ್ದಾರೆ ?<br>***ಉತ್ತರ :***<br>ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿದರೆ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಜ್ಞಾನರಾಶಿಗೆ ಆಘಾತವನ್ನು ಎದುರಿಸುವ ಶಕ್ತಿ ಇಲ್ಲ. ಆದುದರಿಂದ ಅವರಿಗೆ ಸಂಸ್ಕೃತಿಯನ್ನು ನೀಡಬೇಕು. ಏಕೆಂದರೆ ಕೇವಲ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಸಂಸ್ಕೃತಿಯು ರಕ್ತದಲ್ಲಿ ಹರಿಯುವಂತೆ ಮಾಡಬೇಕು ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗುತ್ತದೆ ಎಂದು ವಿವೇಕಾನಂದರು ಹೇಳಿದ್ದಾರೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?<br>***ಉತ್ತರ :***<br>ಚಂದನವನ್ನು ಕಡಿದು, ಕೊರೆದು, ತೇದರೂ ನೊಂದು ಅದು ತನ್ನ ಸುವಾಸನೆ ಬಿಡದು. ಸುವರ್ಣವನ್ನು ಕಡಿದು, ಅರೆದು, ಬೇಯಿಸಿದರೂ ಕಳಂಕ ಹೊಂದುವುದಿಲ್ಲ. ಕಬ್ಬನ್ನು ಸಂದು ಸಂದು ಕಡಿದು ಗಾಣದಲ್ಲಿಟ್ಟು ಅರೆದು ಪಾಕ ಮಾಡಿ, ಅದು ಸಕ್ಕರೆಯಾದ ಮೇಲೆ ತಾನು ನೊಂದಿದ್ದ ಕಾರಣದಿಂದ ಸಿಹಿ ಬಿಡುವುದಿಲ್ಲ. ಹಾಗೆ ನನ್ನ ಹೀನತೆ ತಿಳಿಸಿ ಕೊಂದರೂ ನಾನು ನಿನ್ನಲ್ಲಿ ಶರಣಾಗುವುದನ್ನು ಬಿಡುವುದಿಲ್ಲ ಎಂದು ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ. | |
| 27. | ಪೈಗಳು ಪ್ರಾಸ ತೊರೆದು ಬರೆಯಲು ನಿಶ್ಚಯಿಸಿದ ಸಂದರ್ಭವನ್ನು ವಿವರಿಸಿ.<br>***ಉತ್ತರ :***<br>೧೯೧೧ ರ ಏಪ್ರಿಲ್ ತಿಂಗಳಲ್ಲಿ ಗೋವಿಂದ ಪೈಗಳು ಒಂದು ತಿಂಗಳು ಬರೋಡಾದ ನವಸಾರಿಯಲ್ಲಿದ್ದರು. ಆಗ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೈಯ್ಯುತ್ತಿದ್ದಾಗ ಹಠತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನಮೇಷ ನೋಡದೆ 'ಪ್ರಾಸವನೀಗಲೆ ತೊರೆದು ಬಿಡುವುದೇ ನಿಶ್ಚಯಂ' ಎಂದು ಪೈಗಳು ಪ್ರಾಸ ಬಿಟ್ಟು ಬರೆಯಲು ನಿಶ್ಚಯಿಸಿದರು. ರವೀಂದ್ರನಾಥ ಠಾಕೂರರ 'ಭಾರತ ಲಕ್ಷ್ಮಿ', 'ವಿದಾಯ' ಗೀತೆಗಳನ್ನು, ಶೇಖ್ ಮಹಮ್ಮದ ಇಕ್ಬಾಲರ 'ಹಿಂದೂಸ್ತಾನ ಹಮಾರ' ಗೀತವನ್ನು ಕನ್ನಡಿಸಿ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದರು. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

28. ಎಂ. ಮರಿಯಪ್ಪಭಟ್ಟ :

***ಉತ್ತರ :***

ಬಹುಭಾಷಾ ವಿದ್ವಾಂಸರಾದ ಎಂ. ಮರಿಯಪ್ಪಭಟ್ಟರು ಸಾ.ಶ. ೧೯೦೬ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಶ್ರೀಯುತರು 'ತುಳು-ಇಂಗ್ಲಿಷ್ ನಿಘಂಟು, ಕನ್ನಡ ಸಂಸ್ಕೃತಿ, ಅಭಿನವಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು 'ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಪಡೆದಿದ್ದಾರೆ.

29. ಕುಮಾರವ್ಯಾಸ :

***ಉತ್ತರ :***

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಣಪ್ಪ ಸಾ.ಶ. ೧೪೩೦ ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು. ಈತನು 'ಕರ್ಣಾಟ ಭಾರತ ಕಥಾಮಂಜರಿ' (ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ) 'ಐರಾವತ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ 'ರೂಪಕಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಇದೆ.

**VI.** **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** **1 × 3 = 3**

| | |
|---|---|
| ಪ್ರಸ್ತಾರ ಹಾಕುವುದು | 1 ಅಂಕ |
| ಗಣ ವಿಭಾಗಿಸುವುದು | 1 ಅಂಕ |
| ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| ಒಟ್ಟು | 3 ಅಂಕಗಳು |

30. ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U — U | — U U | U — U | U — U | U — U | — U — |
| ತಳವೆ | ಳಗಾಗೆ | ಕಟ್ಟಿಸ | ದೆ ಮಾಣ್ದೊ | ಡೆ ಕೆಮ್ಮ | ನೆ ಮೀಸೆ | ವೊತ್ತೆನೇ |

ಛಂದಸ್ಸು : ಇದು ಅಕ್ಷರಗಣಾಧಾರಿತ 'ಚಂಪಕಮಾಲಾವೃತ್ತ'ದ ಲಕ್ಷ್ಯವಾಗಿದೆ.

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VII.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಮಾರಿಗೌತಣವಾಯ್ತು ನಾಳಿನ ಭಾರತವು"<br><br>***ಉತ್ತರ :***<br><br>ಅಲಂಕಾರದ ಹೆಸರು : ರೂಪಕಾಲಂಕಾರ<br><br>ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.<br><br>ಸಮನ್ವಯ *:* ಉಪಮೇಯ : ನಾಳಿನ ಭಾರತವು<br>ಉಪಮಾನ : ಮಾರಿಗೌತಣ<br><br>ಇಲ್ಲಿ ಉಪಮೇಯವಾದ 'ನಾಳಿನ ಭಾರತ' ಹಾಗೂ ಉಪಮಾನವಾದ 'ಮಾರಿಗೌತಣ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರ'ದ ಲಕ್ಷ್ಯವಾಗಿದೆ. | |
| **VIII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಆಳಾಗ ಬಲ್ಲವನು; ಅರಸಾಗಬಲ್ಲನು.<br><br>**ಅಥವಾ**<br><br>ಒಗ್ಗಟ್ಟಿನಲ್ಲಿ ಬಲವಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಮೈಸೂರು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರು ಶಿಕ್ಷಣದ ಮಹತ್ತ್ವ ಮನಗಂಡು ಪ್ರಾಥಮಿಕ ಶಿಕ್ಷಣ, ವಿಶ್ವವಿದ್ಯಾನಿಲಯ, ತಾಂತ್ರಿಕ, ವೃತ್ತಿಪರ ಶಿಕ್ಷಣಕ್ಕೆ ಸಲ್ಲಿಸಿದ ಕೊಡುಗೆ ವಿವರಿಸಿ ಶಿಕ್ಷಣದ ಪ್ರಸಾರ ಕಾರ್ಯ ಕೈಗೊಂಡ ರೀತಿ ಹೇಳುವಾಗ ಲೇಖಕರು ಈ ಮಾತನ್ನು ಹೇಳಿದ್ದಾರೆ.<br>***ಸ್ವಾರಸ್ಯ :*** ಸ್ವಾತಂತ್ರ್ಯ ಪೂರ್ವಕಾಲದಲ್ಲೇ ಶಿಕ್ಷಣ ಮೂಲಭೂತ ಹಕ್ಕು ಎಂಬ ಪ್ರಜಾಪ್ರಭುತ್ವದ ಆಶಯವನ್ನು ಕಾರ್ಯಗತಗೊಳಿಸಲು ಸರ್ ಎಂ. ವಿಶ್ವೇಶ್ವರಯ್ಯನವರು ನುಡಿದಂತೆ ನಡೆಯಲು ಯೋಜಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 34. | "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ವಿ.ಕೃ. ಗೋಕಾಕ್‌ರವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಲೇಖಕರು ಲಂಡನ್ನಿನ ತಮ್ಮ ಪ್ರವಾಸದ ವಿವರ ದಾಖಲಿಸಿದ ನಂತರ ಪ್ರವಾಸದಿಂದ ಮನಸ್ಸು ವಿಕಾಸ ಹೊಂದಿರುವುದು, | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದೃಷ್ಟಿ, ವಿಶಾಲವಾಗಿರುವುದು ಹಾಗೂ ತಮ್ಮ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ ಎಂದು ಅರಿತ ಬಗ್ಗೆ ಹೇಳುತ್ತಾ ಬೇಕನ್ನನ ಈ ಮಾತನ್ನು ಹೇಳುತ್ತಾರೆ. | |
| | ***ಸ್ವಾರಸ್ಯ :*** 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಎಂಬಂತೆ ಮನೋವಿಕಾಸಕ್ಕೆ, ವಿಶಾಲ ದೃಷ್ಟಿಕೋನ ಪಡೆಯಲು ಸಂಸ್ಕೃತಿಯ ಮಹತ್ವ ಅರಿಯಲು ಪ್ರವಾಸವು ಶಿಕ್ಷಣದ ಒಂದು ರೂಪವೇ ಆಗಿದೆ ಎಂದು ಹೇಳಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 35. | "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯರು ರಚಿಸಿರುವ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಅಗ್ನಿಭೂತಿ ವಾಯುಭೂತಿಯರು ತಂದೆಯ ಮರಣದ ನಂತರ ವಿದ್ಯಾವಂತರಾಗಲು ಬಯಸಿ ತಾಯಿ ಕಾಶ್ಯಪಿ ಹೇಳಿದಂತೆ ಸೋದರಮಾವ ಸೂರ್ಯಮಿತ್ರನ ಬಳಿಗೆ ಬಂದು ತಾಯಿ ಬರೆದ ಪತ್ರ ನೀಡಿ ನಿಂತರು. ಸೂರ್ಯಮಿತ್ರ ಪತ್ರ ಓದಿ ಮಕ್ಕಳು ಸೋದರಮಾವ ಎಂಬ ಸಲುಗೆಯಿಂದ ದರ್ಪಪಟ್ಟು ಕೆಡಬಹುದು ಎಂದು ಭಾವಿಸಿ ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿ ಈ ಮಾತನ್ನು ಹೇಳುತ್ತಾನೆ. | |
| | ***ಸ್ವಾರಸ್ಯ :*** ಕಲಿಕಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಯ ಬಗೆಗಿನ ಆಸಕ್ತಿ, ಪ್ರೀತಿ, ಶ್ರದ್ಧೆ ಬಹುಮುಖ್ಯವಾದುದು ಎಂದು ಗುರುವಾಗಿ ಸೂರ್ಯಮಿತ್ರ ಹೇಳಿರುವ ಮಾತು ಸಾರ್ವಕಾಲಿಕವಾದ ಶ್ರೇಷ್ಠ ಸತ್ಯದ ನುಡಿಯಾಗಿರುವುದು, ಕಲಿಕೆಯಲ್ಲಿ ಸಂಬಂಧದ ಸಲುಗೆ ಅನಗತ್ಯ ಎಂಬ ಆದರ್ಶದ ನಡೆ ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ಸಾರ್ವಭೌಮರಾ ನೆತ್ತಿಯ ಕುಕ್ಕಿ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಸಾಲನ್ನು ದ.ರಾ. ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಕವಿಯು ಕಾಲಪಕ್ಷಿಯು ಹೇಗೆ ಇತಿಹಾಸ ರೂಪಿಸುತ್ತದೆ. ಭೂಮಿಯ ಸ್ವರೂಪವನ್ನೇ ಬದಲಿಸುತ್ತದೆ. ಕಾಲವು ರಾಜ್ಯ-ಸಾಮ್ರಾಜ್ಯವನ್ನು ತೆನೆಯಂತೆ ಒಕ್ಕಿ, ಮಂಡಲ-ಗಿಂಡಲಗಳನ್ನು ಮುಕ್ಕಿ, ಖಂಡಗಳನ್ನು ತೇಲಿಸಿ-ಮುಳುಗಿಸಿ, ಸಾರ್ವಭೌಮರನ್ನೂ ಇತಿಹಾಸ ಆಗಿಸುತ್ತದೆ ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.<br>***ಸ್ವಾರಸ್ಯ :*** 'ಕಾಲಾಯ ತಸ್ಮೈ ನಮಃ' ಎಂಬಂತೆ ಕಾಲವು ಯಾರನ್ನೂ ಉಳಿಸದು, ಎಂತಹ ಸಾರ್ವಭೌಮ ಆದರೂ ಕೇವಲ ಹೆಸರನ್ನಷ್ಟೇ ಉಳಿಸುತ್ತದೆ ಎಂದು ತಿಳಿಸಿರುವ ರೀತಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 37. | "ಗಿಳಿಯೆದೆ ಬಣ್ಣದ ನೋಟ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕವನಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಕವಿಯು ಆಶ್ವಯುಜ ಮಾಸದಲ್ಲಿ ನವಧಾತ್ರಿಯ ಹೆಪ್ಪುಗಟ್ಟಿದ ಹಚ್ಚ ಹಸುರು ಆಗಸ, ಮುಗಿಲು, ಗದ್ದೆ, ಬಯಲು, ಸಂಜೆ, ಬಿಸಿಲು ಹೀಗೆ ಎಲ್ಲೆಡೆ ವ್ಯಾಪಿಸಿರುವ ಬಗೆ ವಿವರಿಸುತ್ತಾ ಶಾಲಿವನದ ಬಗ್ಗೆ ಮೇಲಿನಂತೆ ಹೇಳಿದ್ದಾರೆ.<br>***ಸ್ವಾರಸ್ಯ :*** ಹಸುರಿನ ವಿವಿಧ ರೂಪಗಳನ್ನು ಗಿಳಿಯೆದೆ, ಪೊಸಪಚ್ಚೆ ಮೊದಲಾದವುಗಳ ಮೂಲಕ ಚಿತ್ರಿಸಿ ಕವಿ ಪ್ರಕೃತಿಯ ಆರಾಧನೆ ಆನಂದದ ಸಾಧನ ಎಂಬುದನ್ನು ಮನವರಿಕೆ ಮಾಡಿರುವ ರೀತಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನೊರ್ವನೇ ವೀರ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಸಾಲನ್ನು ಲಕ್ಷ್ಮೀಶ ಕವಿ ರಚಿಸಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಲವನು ವಾಲ್ಮೀಕಿ ಆಶ್ರಮದ ಉಪವನಕ್ಕೆ ಬಂದ ಯಾಗದ ಕುದುರೆ ತೋಟವನ್ನು ತುಳಿದು ಹಾಳು ಮಾಡುತ್ತಿದೆ ಎಂದು ಕಳವಳಗೊಂಡು ಮುನಿಸುತರೊಡನೆ ಕುದುರೆ ಬಳಿಗೆ ಧಾವಿಸಿ ಬಂದು ಅದರ ಹಣೆಯ ಮೇಲಿದ್ದ ಬರೆಹ ನೋಡುತ್ತಾ ಈ ಮೇಲಿನ ವಾಕ್ಯವನ್ನು ಓದಿಕೊಳ್ಳುತ್ತಾನೆ.<br>***ಸ್ವಾರಸ್ಯ :*** ಕವಿ ಭೂಮಂಡಲದಲ್ಲಿ ರಾಮನೋರ್ವನೇ ವೀರ ಎಂದು ನಿಶ್ಚಯಾರ್ಥದಲ್ಲಿ ಹೇಳುವ ಮೂಲಕ ಓದುತ್ತಿರುವ ಜಾನಕಿಯ ಮಗ ಲವನ ಬಾಲ ಸಹಜ ಸಾಹಸ ಪ್ರವೃತ್ತಿ, ವೀರತೆಯನ್ನು ಪ್ರಚೋದಿಸುತ್ತಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| **X.** | **ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :** | **1 × 4 = 4** |
| 39. | ಅಂತೆಂಬನಾರ್ಗೆ ................................................<br>................................................................<br>................................................................<br>........................................................ ನುಡಿದಂ<br>**ಅಥವಾ**<br>ಒಡವೆಯನರ್ಥಿಗಿತ್ತೆ ..........................................<br>................................................................<br>................................................................<br>.............................................. ಕುಂಭಸಂಭವಂ<br>***ಉತ್ತರ :*** | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಟೆಂತೆನಗೆ ಕೆಳೆಯನೇ ನೂಂ
ಕಂತಪ್ಪನನಱೆಯೆನೆಂದು ಸಭೆಯೊಳ್ ನುಡಿದಂ

**ಅಥವಾ**

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇೞಿವರೊಳಾವುದನೀವುದೊ ಕುಂಭಸಂಭವಂ

**XI.** **ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** **1 × 4 = 4**

| | |
|---|---|
| ವಿಷಯಾಂಶಕ್ಕೆ | 3 ಅಂಕಗಳು |
| ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| ಒಟ್ಟು | 4 ಅಂಕಗಳು |

40. ಜಡಗ ಹೇಳುತಾನೊ ಹೊಡೆಯಿರಿ ಇವರ ಪೂರ ಘಾತಕರಾ
ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ
ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ

***ಉತ್ತರ :***

ಪ್ರಸ್ತುತ ಪದ್ಯವನ್ನು ಅನಕ್ಷರಸ್ಥ ಬೇಡ ಜನರು ಬ್ರಿಟಿಷರ ದೌರ್ಜನ್ಯ ವಿರೋಧಿಸಿ ಹೋರಾಡಿದ ದೇಶಪ್ರೇಮ-ಸ್ವಾಭಿಮಾನದ ಕಥನವಿರುವ ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಹಲಗಲಿ ಬೇಡರು' ಎಂಬ ಲಾವಣಿಯಿಂದ ಆರಿಸಿಕೊಳ್ಳಲಾಗಿದೆ.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸಹ ನಡೆಸಿದರು. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಶಸ್ತ್ರೀಕರಣ ಹುಕುಮನ್ನು ಹೊರಡಿಸಿದರು. ಇದರ ಪ್ರಕಾರ, ಬ್ರಿಟಿಷರ ಅನುಮತಿಯಿಲ್ಲದೆ ಭಾರತೀಯರು ಯಾರೂ ಶಸ್ತ್ರಾಸ್ತ್ರ ಹೊಂದುವಂತಿರಲಿಲ್ಲ ಹಾಗೂ ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಪ್ಪಿಸಬೇಕು ಎಂದಿತ್ತು. ಈ ಕಾನೂನನ್ನು ವಿರೋಧಿಸಿ ಹಲಗಲಿಯ ಬೇಡರಾದ ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರ ನಾಯಕತ್ವದಲ್ಲಿ ದಂಗೆ ಎದ್ದರು. ಆಯುಧಗಳನ್ನು ಒಪ್ಪಿಸಿ ಎಂದು ಹೇಳಲು ಬಂದ ಕಾರಕೂನನ ಕಪಾಳಕ್ಕೆ ಹೊಡೆಯುತ್ತಾರೆ. ಈ ಸುದ್ದಿ ಸಾಹೇಬನಿಗೆ ತಲುಪುತ್ತದೆ. ಹೆಬಲಕ್ ಸಾಹೇಬ ಹಲಗಲಿಗೆ ದಂಡು ತಂದು ಬೇಡರಿಗೆ ಶರಣಾಗುವಂತೆ ಎಚ್ಚರಿಕೆ ನೀಡಿದನು. ಆಗ ಜಡಗ ತನ್ನ ಜೊತೆಗಾರರಿಗೆ, ಈ ಸಾಹೇಬ ಹೇಳುವ ಮಾತು ಕೇಳಬೇಡಿ. ಕ್ರೂರಿಗಳಾದ ಇವರು ವಿಶ್ವಾಸಘಾತಕರು, ಪಿತೂರಿ ಮಾಡುವವರು. ಮೋಸ ಮಾಡಿ ನಮ್ಮ ದೇಶ ಗೆಲ್ಲುತ್ತಾರೆ. ನಮಗೆ ಮುಂದೆ ಅಪಾಯ ಕಾದಿದೆ. ನಾವು ಇವರನ್ನೂ ಇವರ ಮಾತನ್ನೂ ನಂಬಬಾರದು ಎಂದು ಹೇಳುತ್ತಾ ಹೋರಾಡುತ್ತಾ ಗುಂಡು ಹಾರಿಸಿದಾಗ, ಹೆಬಲಕ್ ಸಾಹೇಬ ಮರಣಿಸುತ್ತಾನೆ ಎಂದು ಲಾವಣಿಕಾರ ಜಡಗ ಹೆಬಲಕ್ ಸಾಹೇಬನನ್ನು ಎದುರಿಸಿದ ರೀತಿಯನ್ನು ವಿವರಿಸಿದ್ದಾನೆ.<br>ಅನಕ್ಷರಸ್ಥರಾಗಿದ್ದರೂ, ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಸಾಮಾನ್ಯ ಯುವಕರು ಬ್ರಿಟಿಷರ ದಮನಕಾರಿ ನೀತಿಯನ್ನು ಅರಿತು ವಿರೋಧಿಸಿ ದೇಶಪ್ರೇಮ, ಸ್ವಾತಂತ್ರ್ಯದ ಬಗ್ಗೆ ಪ್ರೀತಿ, ಹೋರಾಟ ಮನೋಭಾವ, ಸ್ವಾಭಿಮಾನ ಎಲ್ಲವನ್ನೂ ಪ್ರಕಟಪಡಿಸಿ ಯುವಜನಾಂಗಕ್ಕೆ ಆದರ್ಶವಾಗಿರುವುದು, ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿರುವುದು ಇಲ್ಲಿ ಅಡಕವಾಗಿರುವ ಮೌಲ್ಯವಾಗಿದೆ. | |
| **XII.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **2 × 4 = 8** |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ. | |
| | **ಅಥವಾ** | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮುದುಕಿಯು ರಾಹಿಲನನ್ನು ಸೈನಿಕರಿಂದ ರಕ್ಷಿಸಿದ ಬಳಿಕ ಯುದ್ಧದಿಂದ ತಾನು ಅನುಭವಿಸಿದ ಸಂಕಟವನ್ನು ಹೇಗೆ ವಿವರಿಸಿದಳು ? | |
| | ***ಉತ್ತರ :*** | |
| | ರಾಹಿಲನು ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ಚಿಕಿತ್ಸೆ ನೀಡುವ ವೈದ್ಯನಾಗಿದ್ದನು. ಅವನು ಪ್ರಯಾಣಿಸುತ್ತಿದ್ದ ಯುದ್ಧ ವಿಮಾನ ಶತ್ರು ದೇಶದ ಗಡಿಪ್ರದೇಶದಲ್ಲಿ ದಾಳಿಗೊಳಗಾಗಿ ಗ್ರೌಂಡಿನ ಸಂಪರ್ಕ ಕಳೆದುಕೊಂಡು ಕೆಳಗೆ ಬಿದ್ದಿತು. ಆ ಅಪಘಾತದಲ್ಲಿ ರಾಹಿಲನ ಕಾಲಿಗೆ ತೀವ್ರವಾದ ಗಾಯವಾಗಿತ್ತು. ಆದರೂ ನೀರಿನಲ್ಲಿ ಈಜುತ್ತಾ ದಡ ಸೇರಿ ಮುದುಕಿಯ ಮನೆಯಿದ್ದ ಪ್ರದೇಶಕ್ಕೆ ತೆವಳುತ್ತಾ ಬರುತ್ತಾನೆ. ಮದುಕಿಯ ಸೊಸೆ ಹೇರಿಗೆ ಬೇನೆಯಿಂದ ನರಳುತ್ತಾ ಆರ್ತನಾದ ಮಾಡುತ್ತಿರುತ್ತಾಳೆ. ರಾಹಿಲ ಮನೆಯೊಳಗೆ ಪ್ರವೇಶಿಸಿದಾಗ ಮಹಿಳೆಯ ಆರ್ತನಾದಕ್ಕೆ ಕಾರಣ ತಿಳಿದು ಮುದುಕಿಗೆ ತಾನು ವೈದ್ಯ ಎಂದು ತಿಳಿಸಿ ಅವಳ ಸೊಸೆಗೆ ಹೆರಿಗೆ ಮಾಡಿಸುತ್ತಾನೆ. ಮಗುವನ್ನು ಉಳಿಸಲು ಸಾಧ್ಯವಾಗದೇ ಇದ್ದರೂ ಹೆಂಗಸನ್ನು ಉಳಿಸುವಲ್ಲಿ ಯಶಸ್ವಿಯಾಗುತ್ತಾನೆ. ನಂತರ ಮುದುಕಿ ರಾಹಿಲನಿಗೆ ಅವನ ಕಾಲಿನ ಆರೈಕೆಗೆ ಪುಟ್ಟ ಹಲಗೆಯ ತುಂಡು, ಬಟ್ಟೆ ನೀಡಿದಳು. ಅವನು ಅದರಿಂದ ತನ್ನ ಕಾಲಿನ ಗಾಯಕ್ಕೆ ಪಟ್ಟಿ ಕಟ್ಟಿ ಕೊಂಡನು. ಆ ವೇಳೆಗೆ ವಿಮಾನದಿಂದ ಬಿದ್ದ ಶತ್ರು ಸೈನಿಕರನ್ನು ಹುಡುಕುತ್ತಾ ಬಂದ ಸೈನಿಕರು ಮುದುಕಿಯ ಮನೆಯ ಬಾಗಿಲು ತಟ್ಟುತ್ತಾರೆ. ರಾಹಿಲ ಶತ್ರು ದೇಶದವನೆಂದು ತಿಳಿದರೂ ಆತನಲ್ಲಿ ತನ್ನ ಮಗನನ್ನು ಕಂಡು ರಕ್ಷಿಸಲು ನಿರ್ಧರಿಸಿ ಮುದುಕಿ ಬಾಗಿಲು ತೆರೆದು ಬಂದ ಸೈನಿಕರಿಗೆ ನಿರ್ಜೀವ ಮಗು ತೋರಿಸುತ್ತಾಳೆ. ರಾಹಿಲನನ್ನು ಸೊಸೆಯು ಮಲಗಿದ್ದ ಮಂಚದಡಿ ಅವಿತಿಡುತ್ತಾಳೆ. ಹೀಗೆ ತನ್ನ ದೇಶದ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸೈನಿಕರಿಂದ ರಾಹಿಲನನ್ನು ರಕ್ಷಿಸುತ್ತಾಳೆ. ಯುದ್ಧದ ಕ್ರೌರ್ಯದಲ್ಲಿ ರಾಹಿಲ ವೈದ್ಯನಾಗಿ, ಮುದುಕಿ ತಾಯಿಯಾಗಿ ಮೆರೆದ ಮಾನವೀಯತೆ ಎಲ್ಲಕ್ಕಿಂತ ಶ್ರೇಷ್ಠ ಎಂದು ಸಾರುತ್ತಾರೆ.<br><br>**ಅಥವಾ**<br><br>ರಾಹಿಲನನ್ನು ಹುಡುಕಿಕೊಂಡು ಬಂದ ಸೈನಿಕರು ಹಿಂದಿರುಗಿದ ಒಂದೆರಡು ದಿನಗಳಲ್ಲಿ ಇಬ್ಬರಲ್ಲೂ ಪರಸ್ಪರ ವಿಶ್ವಾಸ ಮೂಡಿತು. ಇಬ್ಬರೂ ತಮ್ಮ ಸುಖದುಃಖಗಳನ್ನು ಹಂಚಿಕೊಂಡರು. ಮೊದಲು ಮುದುಕಿಯು ರಾಹಿಲನ ಬಳಿ ತನ್ನ ಜೀವನದ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಾಳೆ. ಅವಳು ಆ ಊರಿಗೆ ಮದುವೆಯಾಗಿ ಬಂದು ಐವತ್ತು ವರ್ಷಗಳಾಗಿತ್ತು. ಮದುವೆಯಾಗಿ ಬಂದಾಗ ನೆಮ್ಮದಿಯೂ ಇತ್ತು. ಜಮೀನು, ಆಸ್ತಿ ಎಲ್ಲಾ ಇತ್ತು. ಆದರೆ ಯುದ್ಧ ಜನರನ್ನು ನೆಮ್ಮದಿಯಾಗಿ ಇರಲು ಬಿಡಲಿಲ್ಲ. ಈ ಊರು ಆ ದೇಶದವರ ಕೈಯಲ್ಲಿತ್ತು. ಅವರ ಧರ್ಮ ಬೇರೆ, ಇವರ ಧರ್ಮ ಬೇರೆ ಎಂಬ ಕಾರಣಕ್ಕೆ ಯುದ್ಧ ಆಯಿತು. ಸಾವಿರಾರು ಜನ ಸತ್ತ ನಂತರ ಯುದ್ಧ ನಿಂತು ಈ ಊರು ಈ ದೇಶಕ್ಕೆ ಸೇರಿತು. ಊರೇನೋ ಕೈ ಬದಲಾಯಿಸಿತು. ಆದರೆ ಬದುಕಿನಲ್ಲಿ ವ್ಯತ್ಯಾಸವೇನೂ ಆಗಲಿಲ್ಲ. ಬೆವರಿಳಿಸಿ ದುಡಿದಿದ್ದನ್ನು ಈ ಜನ ಹಲವು ಹೆಸರು ಹೇಳಿ, ಹಲವು ಕಾರಣ ನೀಡಿ ದೋಚಿಕೊಂಡು ಹೋಗುತ್ತಾರೆ. ದುಡಿದಿದ್ದನ್ನು ಕೊಂಡು ಹೋದರೆ ಹಾಳಾಗಲಿ ಎಂದು ಸುಮ್ಮನಾಗಬಹುದಿತ್ತು. ಆದರೆ ಮನೆಯ ಮಕ್ಕಳನ್ನು ಯುದ್ಧಕ್ಕೆ ಕರೆದುಕೊಂಡು ಹೋಗುತ್ತಾರೆ. ಮಗ ಚಿಕ್ಕವನಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಹಾಗೆ ಇದೆ. ಎಲ್ಲ ದುಃಖ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನುಂಗಿಕೊಂಡು ಮಗನನ್ನು ಬೆಳೆಸಿ ದೊಡ್ಡವನನ್ನಾಗಿಸಿ ಮದುವೆ ಮಾಡಿದೆ. ಐದಾರು ವರ್ಷಗಳಾದ ನಂತರ ಸೊಸೆ ಗರ್ಭಿಣಿಯಾದಳು. ಮನೆಯಲ್ಲಿ ಮಗುವಿನ ಅಳು ಕೇಳಲು ಮಗ ತುದಿಗಾಲಲ್ಲಿ ನಿಂತಿದ್ದ. ಅಷ್ಟರಲ್ಲಿ ಯುದ್ಧ ಬಂದು ಅವನು ಯುದ್ಧಕ್ಕೆ ಹೋದ. ಈ ಯುದ್ಧದಿಂದ ಅವನ ಮಗುವನ್ನು ಉಳಿಸಿಕೊಳ್ಳಲಾಗಲಿಲ್ಲ. ಮಗನಾದರೂ ಹಿಂದಿರುಗಿ ಬಂದರೆ ಸಾಕು. ಮಗು ಬದುಕಿಲ್ಲ ಎಂಬ ವಿಷಯ ತಿಳಿದು ಎಷ್ಟು ಸಂಕಟ ಪಡುತ್ತಾನೋ ಎಂದು ಮುದುಕಿ ತಾನು ಅನುಭವಿಸಿದ ಸಂಕಟವನ್ನು ರಾಹಿಲನಿಗೆ ವಿವರಿಸಿದಳು. | |
| 42. | ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ ? ವಿವರಿಸಿ.<br><br>**ಅಥವಾ**<br><br>ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ಬರೆಯಿರಿ.<br><br>***ಉತ್ತರ :***<br><br>ಸಾಧಿಸುವ ಸಂಕಲ್ಪ ಕೈಗೊಂಡು ಸಾಧಕರಾದವರನ್ನು ಇತಿಹಾಸ ದಾಖಲಿಸುತ್ತದೆ, ನೆನಪಿಟ್ಟುಕೊಳ್ಳುತ್ತದೆ. ಜೀವನದಲ್ಲಿ ಆತ್ಮವಿಶ್ವಾಸದಿಂದ ಧನಾತ್ಮಕ ಭಾವನೆಗಳನ್ನು ಹೊಂದಿ ಸಂಕಲ್ಪ ಕೈಗೊಂಡರೆ ಯಶಸ್ಸು ಖಂಡಿತ ಎಂದು ಕವಿ ಸಂಕಲ್ಪಗೀತೆ ಕವನದಲ್ಲಿ ತಿಳಿಸಿದ್ದಾರೆ. ಕವಿ ನಮ್ಮ ಸುತ್ತಲೂ ಇರುವ ಅಜ್ಞಾನ ಅನ್ಯಾಯದಿಂದ ಮೂಡುವ ದ್ವೇಷದ ಕತ್ತಲನ್ನು ಜ್ಞಾನ ನ್ಯಾಯದಿಂದ ಮೂಡುವ ಪ್ರೀತಿಯ ಹಣತೆ ಹಚ್ಚಿ ಬೆಳಕ ಹರಡಿ ದೂರ ಮಾಡುವ ಸಂಕಲ್ಪ ನಮ್ಮದಾಗಬೇಕು ಎನ್ನುತ್ತಾರೆ. ಬದುಕಲ್ಲಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎದುರಾಗುವ ಸಂಕಷ್ಟಗಳೆಂಬ ಬಿರುಗಾಳಿಗೆ ಸಿಲುಕಿ ಹೊಯ್ದಾಡುವ ಮನವೆಂಬ ಹಡಗನ್ನು ಎಚ್ಚರದಲ್ಲಿ ಗುರಿಯೆಡೆಗೆ ನಡೆಸುವ ಸಂಕಲ್ಪ ನಮ್ಮದಾಗಬೇಕು. ನದೀಜಲ ಕಲುಷಿತವಾಗಿದೆ ಎಂದು ದೂಷಿಸಿ ಸುಮ್ಮನಾಗದೆ ಮುಂಗಾರಿನ ಮಳೆಯಾಗಿ ಅದನ್ನು ಶುದ್ಧ ಮಾಡುವ ಸಂಕಲ್ಪ ನಮ್ಮದಾಗಬೇಕು. ಕಾಡುಮೇಡುಗಳು ಬರಡಾಗಿವೆ ಎಂದು ಸುಮ್ಮನೆ ಕೂರುವ ಬದಲು ವಸಂತವಾಗಿ ಅದನ್ನು ಹಸಿರಾಗಿಸುವ ಪ್ರಯತ್ನದ ಸಂಕಲ್ಪ ನಮ್ಮದಾಗಬೇಕು. ಸಾಮಾಜಿಕವಾಗಿ ವೈಯಕ್ತಿಕ ನೆಲೆಯಲ್ಲಿ ಅಸಮಾನತೆಯಿಂದ ಸೋತು ಬಿದ್ದಿರುವವರ ಎಬ್ಬಿಸಿ ನಿಲ್ಲಿಸಿ ಅವರಲ್ಲಿ ಭರವಸೆ ತುಂಬಿ ಮುನ್ನಡೆಸುವ ಸಂಕಲ್ಪ ನಮ್ಮದಾಗಬೇಕು. ಮನುಷ್ಯರ ನಡುವಿನ ಎಲ್ಲಾ ಅಡ್ಡಗೋಡೆ ಕೆಡವಿ ಸಾಮರಸ್ಯದ ಸೇತುವೆ ನಿರ್ಮಿಸುವ ಸಂಕಲ್ಪ ನಮ್ಮದಾಗಬೇಕು. ಧರ್ಮಗಳು ಕೇವಲ ಮಾರ್ಗಗಳು. ಅದೇ ಬದುಕಿನ ಗುರಿಯಲ್ಲ ಎಂಬ ಎಚ್ಚರದ ಸಹನೆಯ ಸಂಕಲ್ಪ ನಮ್ಮದಾಗಬೇಕು. ಬದುಕಿನ ಭವಿಷ್ಯದ ಬಗ್ಗೆ ಭಯ ಸಂಶಯ ತುಂಬಿರುವ ಕಣ್ಣುಗಳಲ್ಲಿ ಭರವಸೆ ನೆಮ್ಮದಿಯ ನಾಳಿನ ಕನಸನ್ನು ಮೂಡಿಸುವ ಸಂಕಲ್ಪ ನಮ್ಮದಾಗಬೇಕು ಎಂದು ಕವಿ ನಾವು ಸದಾ ಭರವಸೆ, ನಂಬಿಕೆ ಆಶಾವಾದದ ಸಂಕಲ್ಪ ಕೈಗೊಳ್ಳಬೇಕೆಂದು ತಿಳಿಸುತ್ತಾರೆ.<br><br>**ಅಥವಾ**<br><br>ಕವಿ ಜಿ.ಎಸ್. ಶಿವರುದ್ರಪ್ಪನವರು ಸಂಕಲ್ಪಗೀತೆ ಕವನದಲ್ಲಿ ನಮ್ಮ ಮುಂದಿರುವ ಸವಾಲು ಸಮಸ್ಯೆಗಳು ಯಾವುವು ? ಎಂಬುದನ್ನು ತಿಳಿಸಿ ಸುಮ್ಮನಾಗದೆ ಅವುಗಳ ಪರಿಹಾರಕ್ಕೆ ನಾವು ಕೈಗೊಳ್ಳಬೇಕಾದ ಸಂಕಲ್ಪ ಅನುಷ್ಠಾನಗೊಳಿಸಬೇಕಾದ ರೀತಿಯನ್ನು ವಿವರಿಸಿದ್ದಾರೆ. ಕವಿ ನಮ್ಮ ಸುತ್ತಲೂ ಅಜ್ಞಾನದಿಂದ ಮೂಡಿದ ಅಸಮತೆಯ ದ್ವೇಷದ ಕತ್ತಲ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಮಸ್ಯೆ ಇದೆ. ಅದನ್ನು ಜ್ಞಾನ ಸಮತೆಯ ಪ್ರೀತಿಯ ಹಣತೆಯ ಬೆಳಕಿನಿಂದ ದೂರಮಾಡಿ ಪರಿಹಾರ ಪಡೆಯಬೇಕು. ಸಂಕಷ್ಟಗಳ ಬಿರುಗಾಳಿಗೆ ಸಿಲುಕಿ ನಲುಗುವ ಮನವೆಂಬ ಹಡಗನ್ನು ಎಚ್ಚರವಾಗಿ ಮುನ್ನಡೆಸಬೇಕು. ಹೀಗೆ ಕವಿ ವೈಯಕ್ತಿಕ ನೆಲೆಯ ಸಮಸ್ಯೆ ಅದರ ಪರಿಹಾರದ ಸಂಕಲ್ಪ ಅನುಷ್ಠಾನದ ಕುರಿತು ತಿಳಿಸುತ್ತಾರೆ. ನದೀಜಲ ಕಲುಷಿತವಾಗಿರುವುದನ್ನು ಮುಂಗಾರಿನ ಮಳೆಯಾಗಿ, ಬರಡಾಗಿರುವ ಕಾಡು–ಮೇಡನ್ನು ವಸಂತವಾಗಿ ಹಸಿರಾಗಿಸಬೇಕೆಂದು ಪರಿಸರದ ನೆಲೆಯಲ್ಲಿ ಸಮಸ್ಯೆ ಪರಿಹಾರದ ಸಂಕಲ್ಪ ತಿಳಿಸುತ್ತಾರೆ. ಬಿದ್ದವರಲ್ಲಿ ಬದುಕಿನ ಭರವಸೆ ತುಂಬುವ, ಅಸಮತೆಯ ಗೋಡೆ ಕೆಡವಿ ಸಾಮರಸ್ಯದ ಸೇತುವೆ ಕಟ್ಟುವ ಕಾರ್ಯದ ಬಗ್ಗೆ ತಿಳಿಸುತ್ತಾ, ಸಾಮಾಜಿಕ ನೆಲೆಯಲ್ಲಿ ಕಾಣುವ ಶೋಷಣೆಯ ಕಾರಣ ಹಾಗೂ ಪರಿಹಾರದ ಬಗ್ಗೆ ತಿಳಿಸಿದ್ದಾರೆ. ಧರ್ಮವು ಗುರಿಯಾಗದೆ ಸ್ನೇಹ ನಂಬಿಕೆ ಬದುಕಿನ ದಾರಿಯಾಗಬೇಕು. ಭಯ ಸಂಶಯ ದೂರೀಕರಿಸಿ ಬದುಕುವ ಭರವಸೆಯ ಕನಸನ್ನು ಬಿತ್ತಬೇಕು ಎಂದು ಧಾರ್ಮಿಕ ನೆಲೆಯಲ್ಲಿ ಕಾಣುವ ಸಮಸ್ಯೆ ಹಾಗೂ ಪರಿಹಾರ ಬಗ್ಗೆ ತಿಳಿಸಿದ್ದಾರೆ. ಹೀಗೆ ಕವಿ ವೈಯಕ್ತಿಕ, ಪರಿಸರ, ಸಾಮಾಜಿಕ, ಧಾರ್ಮಿಕ ಈ ನೆಲೆಗಟ್ಟುಗಳಲ್ಲಿ ನಾವು ಕೈಗೊಳ್ಳಬೇಕಾದ ಸಂಕಲ್ಪ ಅನುಷ್ಠಾನದ ಬಗ್ಗೆ ಸುಂದರವಾಗಿ ವಿವರಿಸಿದ್ದಾರೆ. | |
| **XIII.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :** | **1 × 4 = 4** <br> **( 2 + 2 )** |
| 43. | ಕನ್ನಡ ಭಾಷೆ ತನ್ನ ಜೀವನದುದ್ದಕ್ಕೂ ಅನ್ಯ ಭಾಷೆಗಳ ಧಾಳಿಯನ್ನು ಎದುರಿಸುತ್ತಲೇ ಬಂದಿದೆ. ಈ ಧಾಳಿಯಲ್ಲಿ ಸಿಕ್ಕು ಗಾಸಿಯಾದ ಸಮಯದಲ್ಲಿ ಆಗಾಗ ಪುಣ್ಯಪುರುಷರು ಹುಟ್ಟಿ ಹೋರಾಡಿ ಅದನ್ನು ಬದುಕಿಸಿದ್ದಾರೆ. 12ನೆಯ ಶತಮಾನದಲ್ಲಿ ಕನ್ನಡವು ಸಂಸ್ಕೃತದಷ್ಟೇ ಸಮರ್ಥವಾದ ಭಾಷೆಯೆಂಬುದನ್ನು ಶರಣರು ದುಡಿದು | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತೋರಿಸಿದರು. 15ನೇ ಶತಮಾನದಲ್ಲಿ ಕನ್ನಡವು ಸಂಸ್ಕೃತದಷ್ಟೇ ಪೂಜ್ಯವಾದ ಭಾಷೆಯೆಂಬುದನ್ನು ದಾಸರು ನಡೆದು ತೋರಿಸಿದರು. ಇಂಥದೇ ಕಷ್ಟಕಾಲ 19ನೆಯ ಶತಮಾನದಲ್ಲಿ ಕನ್ನಡಕ್ಕೆ ಒದಗಿರಲು ಅದರ ಬೆನ್ನುಕಟ್ಟಿ ಹೋರಾಡಿದವರು ಡೆಪ್ಯೂಟಿ ಚೆನ್ನಬಸಪ್ಪನವರು. ಆಗ ಅನ್ಯಭಾಷೆಗಳು ಕನ್ನಡ ಭಾಷೆಯ ಕತ್ತನ್ನು ಹಿಸುಕುತ್ತಲಿದ್ದವು. ಓದು-ಬರೆಹ, ಮಾತು-ಕತೆಗಳಲ್ಲಿ ಕನ್ನಡವನ್ನು ಬಳಸುವುದು ಅಗೌರವವೆಂದು ಕನ್ನಡಿಗರೇ ಭಾವಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆ ಒಂದೂ ಇರಲಿಲ್ಲ. ಇದರಿಂದಾಗಿ ತನ್ನ ದೇಶದಲ್ಲಿಯೇ ಕನ್ನಡ ಭಾಷೆ ಪರದೇಶಿ ಮಗನಂತೆ ಬದುಕುತ್ತಲಿದ್ದಿತು. ಆಗ ಅದಕ್ಕೆ ಮನೆಯ ಮಗನ ಸ್ಥಾನ ಒದಗಿಸಿಕೊಟ್ಟವರು ಡೆಪ್ಯೂಟಿ ಚೆನ್ನಬಸಪ್ಪನವರು. ಈ ಕಾರಣಕ್ಕಾಗಿಯೇ ಜನರು ಅವರನ್ನು 'ಕನ್ನಡದ ಹುಲಿ' ಎಂದು ಕರೆಯುತ್ತಿದ್ದರು. 1866ರಲ್ಲಿ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ ಮರಣ ಪರ್ಯಂತ ಎಂದರೆ 1881ರವರೆಗೆ ಆ ಹುದ್ದೆಯಲ್ಲಿಯೇ ನಿಂತು ಕನ್ನಡಕ್ಕೆ ಇನ್ನೂ ಘನವಾದ ಸೇವೆ ಸಲ್ಲಿಸಿದರು. ಹೀಗಾಗಿ ಧಾರವಾಡ ಚೆನ್ನಬಸಪ್ಪ ಎನ್ನುವುದಕ್ಕೆ ಬದಲು ಡೆಪ್ಯೂಟಿ ಚೆನ್ನಬಸಪ್ಪ ಎಂಬ ಹೆಸರೇ ಪ್ರಚಾರ ಪಡೆಯಿತು. ಚೆನ್ನಬಸಪ್ಪನವರು ಹಳ್ಳಿ, ಪಟ್ಟಣ ಸಂಚರಿಸಿ ಕನ್ನಡವನ್ನೇ ಶಾಲೆಯಲ್ಲಿ ಕಲಿಸಲು ವ್ಯವಹಾರದಲ್ಲಿ ಬಳಸಲು ಸಾರ್ವಜನಿಕರಿಗೆ, ಶಿಕ್ಷಕರಿಗೆ ಪ್ರಾರ್ಥಿಸಿದರು, ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ 1855ರಲ್ಲಿ ಬೆಳಗಾವಿ, ವಿಜಾಪುರ, ಧಾರವಾಡದಲ್ಲಿ 1, 3, 9, 12 ಇದ್ದ ಕನ್ನಡ ಶಾಲೆ 1882ರ ವೇಳೆಗೆ 166, 150, 241 ಕ್ಕೆ ಏರಿತು. ಕನ್ನಡ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಪಂಡಿತರಿಂದ ಒಳ್ಳೆಯ ಪಠ್ಯಪುಸ್ತಕಗಳನ್ನು ಬರೆಯಿಸಿದರು. ಶಿಕ್ಷಕರು ಕನ್ನಡದ ಬದಲಿಗೆ ಮರಾಠಿ ಪದಗಳನ್ನು ಬಳಸಿದರೆ ದಂಡ ವಿಧಿಸಿ ಕನ್ನಡ ಬಳಕೆಗೆ ಒತ್ತು ನೀಡಿದರು. ಕನ್ನಡ ಇವರ ಪ್ರಯತ್ನದಿಂದ ಮನೆಯ ಯಜಮಾನನ ಸ್ಥಾನ ಪಡೆಯುವಂತಾಯಿತು.<br>***ಪ್ರಶ್ನೆಗಳು:***<br>ಅ) 19ನೆಯ ಶತಮಾನದಲ್ಲಿ ಕನ್ನಡದ ಸ್ಥಿತಿ ಹೇಗಿತ್ತು ?<br>ಬ) ಕನ್ನಡದ ಹುಲಿ ಎನಿಸಿದ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ ಸಲ್ಲಿಸಿದ ಸೇವೆಯನ್ನು ಬರೆಯಿರಿ.<br>***ಉತ್ತರ :***<br>ಅ) 19ನೆಯ ಶತಮಾನದಲ್ಲಿ ಅನ್ಯಭಾಷೆಗಳು ಕನ್ನಡ ಭಾಷೆಯ ಕತ್ತನ್ನು ಹಿಸುಕುತ್ತಲಿದ್ದವು. ಓದು-ಬರೆಹ, ಮಾತು-ಕತೆಗಳಲ್ಲಿ ಕನ್ನಡವನ್ನು ಬಳಸುವುದು ಅಗೌರವವೆಂದು ಕನ್ನಡಿಗರೇ ಭಾವಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆ ಒಂದೂ ಇರಲಿಲ್ಲ. ಇದರಿಂದಾಗಿ ತನ್ನ ದೇಶದಲ್ಲಿಯೇ ಕನ್ನಡ ಭಾಷೆ ಪರದೇಶಿ ಮಗನಂತೆ ಬದುಕುತ್ತಲಿದ್ದಿತು.<br>ಬ) ಚೆನ್ನಬಸಪ್ಪನವರು 1866ರಲ್ಲಿ ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ 1881ರವರೆಗೆ ಆ ಹುದ್ದೆಯಲ್ಲಿಯೇ ಇದ್ದು ಕನ್ನಡಕ್ಕೆ ಸೇವೆ ಸಲ್ಲಿಸಿದರು. ಹಳ್ಳಿ, ಪಟ್ಟಣ ಸಂಚರಿಸಿ ಕನ್ನಡವನ್ನು ಶಾಲೆಯಲ್ಲಿ ಕಲಿಸಲು, ವ್ಯವಹಾರದಲ್ಲಿ ಬಳಸಲು ಸಾರ್ವಜನಿಕರಿಗೆ, ಶಿಕ್ಷಕರಿಗೆ ಪ್ರಾರ್ಥಿಸಿದರು, ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ 1855ರಲ್ಲಿ ಬೆಳಗಾವಿ, ವಿಜಾಪುರ, ಧಾರವಾಡದಲ್ಲಿ 1, 3, 9, 12 ಇದ್ದ ಕನ್ನಡ ಶಾಲೆ ಕ್ರಮವಾಗಿ 1882ರ ವೇಳೆಗೆ 166, 150, 241 ಕ್ಕೆ ಏರಿತು. ಕನ್ನಡ ಪಂಡಿತರಿಂದ ಒಳ್ಳೆಯ ಪಠ್ಯಪುಸ್ತಕ ಬರೆಯಿಸಿದರು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 44. | ನಿಮ್ಮನ್ನು ಮಧುಗಿರಿ ಸರ್ಕಾರಿ ಪ್ರೌಢಶಾಲೆಯ 'ವೆಂಕಟೇಶ' ಎಂದು ಭಾವಿಸಿಕೊಂಡು, ಶಾಲೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ತುಮಕೂರಿನ ನಿವಾಸಿ 'ಭರತ' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವಿದ್ಯಾಭ್ಯಾಸದ ಯೋಜನೆ, ಜೀವನದ ಗುರಿ ಬಗ್ಗೆ ತಿಳಿಸಿ ಬೆಂಗಳೂರಿನಲ್ಲಿ ವಾಸವಾಗಿರುವ 'ಸತ್ಯ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಗೆಳೆಯನಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| | **ಪ್ರಶ್ನಾನುಸಾರ ಮೌಲ್ಯಮಾಪನ** | **ಅಂಕಗಳು** |
|---|---|---|
| **XV.** | **ಪ್ರಬಂಧ ಬರೆವಣಿಗೆ :** | **1 × 5 = 5** |
| 45. | ನೈಸರ್ಗಿಕ ವಿಪತ್ತು ನಿರ್ವಹಣಾ ಕಾರ್ಯದಲ್ಲಿ ತಂತ್ರಜ್ಞಾನದ ಮಹತ್ವ. | |
| | **ಅಥವಾ** | |
| | ತ್ಯಾಜ್ಯವಸ್ತು ನಿರ್ವಹಣೆ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |

**A**

**CCE RF/PF/**
**NSR & NSPR**
**Revised Full Syllabus**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1**

**MARCH/APRIL 2024 EXAMINATION - 1**

**ಮಾದರಿ ಉತ್ತರಗಳು**

**MODEL ANSWERS**

**ಸಂಕೇತ ಸಂಖ್ಯೆ : 01-K** | **CODE NO. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / NSR / NSPR)**

**ದಿನಾಂಕ : 25. 03. 2024 ]** | **[ ಗರಿಷ್ಠ ಅಂಕಗಳು : 100**

**Date : 25. 03. 2024 ]** | **[ Max. Marks : 100**

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **6 × 1 = 6** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ<br>(ಎ) ೦೫ (ಬಿ) ೦೭<br>(ಸಿ) ೧೩ (ಡಿ) ೧೦<br>*ಉತ್ತರ :* (ಡಿ) ೧೦ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಆದೇಶ ಸಂಧಿ (ಬಿ) ಜಶ್ತ್ವ ಸಂಧಿ<br>(ಸಿ) ಶ್ಚುತ್ವ ಸಂಧಿ (ಡಿ) ಅನುನಾಸಿಕ ಸಂಧಿ<br>***ಉತ್ತರ :*** (ಬಿ) ಜಶ್ತ್ವ ಸಂಧಿ | |
| 3. | ತೃತೀಯಾ ವಿಭಕ್ತಿಯ ಕಾರಕಾರ್ಥ<br>(ಎ) ಕರಣಾರ್ಥ (ಬಿ) ಕರ್ಮಾರ್ಥ<br>(ಸಿ) ಸಂಪ್ರದಾನ (ಡಿ) ಸಂಬಂಧ<br>***ಉತ್ತರ :*** (ಎ) ಕರಣಾರ್ಥ | |
| 4. | ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು<br>(ಎ) ಉದ್ಧರಣ (ಬಿ) ವಾಕ್ಯವೇಷ್ಠನ<br>(ಸಿ) ಅರ್ಧವಿರಾಮ (ಡಿ) ಪೂರ್ಣವಿರಾಮ<br>***ಉತ್ತರ :*** (ಸಿ) ಅರ್ಧವಿರಾಮ | |
| 5. | 'ಕೊರೆತ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ<br>(ಎ) ಕೃದಂತನಾಮ (ಬಿ) ಕೃದಂತಭಾವನಾಮ<br>(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ಭಾವನಾಮ<br>***ಉತ್ತರ :*** (ಬಿ) ಕೃದಂತಭಾವನಾಮ | |
| 6. | 'ಕಣ್ದೆರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಅಂಶಿ ಸಮಾಸ (ಬಿ) ಕರ್ಮಧಾರಯ ಸಮಾಸ<br>(ಸಿ) ಕ್ರಿಯಾ ಸಮಾಸ (ಡಿ) ಗಮಕ ಸಮಾಸ<br>***ಉತ್ತರ :*** (ಸಿ) ಕ್ರಿಯಾ ಸಮಾಸ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 7. | ಹಲವು : ಪರಿಮಾಣವಾಚಕ :: ತೆಂಕಣ : ........................ .<br>***ಉತ್ತರ :*** ದಿಗ್ವಾಚಕ | |
| 8. | ಕೋಕಿಲಾ : ಕೋಗಿಲೆ :: ವರ್ಣ : ........................ .<br>***ಉತ್ತರ :*** ಬಣ್ಣ | |
| 9. | ಜನಕಾ : ಜನಕ್ಕೆ :: ಇಸವಾಸ : ........................ .<br>***ಉತ್ತರ :*** ವಿಶ್ವಾಸ | |
| 10. | ಕೆನೆಮೊಸರು : ಜೋಡುನುಡಿ :: ಸಾಕುಸಾಕು : ........................ .<br>***ಉತ್ತರ :*** ದ್ವಿರುಕ್ತಿ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **7 × 1 = 7** |
| 11. | ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ?<br>***ಉತ್ತರ :***<br>ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ 'ಚೇರಿಂಗ್ ಕ್ರಾಸ್'. | |
| 12. | ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ ?<br>***ಉತ್ತರ :***<br>ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣುವುದಿಲ್ಲ. | |
| 13. | ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು ?<br>***ಉತ್ತರ :***<br>ಶಿವನಸಮುದ್ರದ ಬಳಿಯ ಕಾವೇರಿ ನದಿಯಿಂದ ಉತ್ಪಾದಿಸಿದ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆಯಾಗಿದೆ. | |
| 14. | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?<br>***ಉತ್ತರ :***<br>ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವಗುರು, ದ್ವಿಜರ ಪೂಜೆಯನ್ನು ಮಾಡುತ್ತಾ ಕಳೆದನು. | |
| 15. | ಕವಿ ಜಿ.ಎಸ್. ಶಿವರುದ್ರಪ್ಪನವರು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ ? | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಕವಿ ಜಿ.ಎಸ್. ಶಿವರುದ್ರಪ್ಪನವರು ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕಬೇಕೆಂದು ಹೇಳಿದ್ದಾರೆ. | |
| 16. | ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಹೇಗೆ ಕಂಡಿದೆ ? | |
| | ***ಉತ್ತರ :*** | |
| | ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಹೊಸ ಪಚ್ಚೆಯ ಜಮಖಾನೆಯಂತೆ ಕಂಡಿದೆ. | |
| 17. | 'ಬಿಲ್ಲಹಬ್ಬ' ವನ್ನು ರಚಿಸಿದ ಕವಿ ಯಾರು ? | |
| | ***ಉತ್ತರ :*** | |
| | 'ಬಿಲ್ಲಹಬ್ಬ' ವನ್ನು ರಚಿಸಿದ ಕವಿ ಮೂಲ್ಕಿಯ ವಾಸುದೇವ ಪ್ರಭು. | |
| **IV.** | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) :** | **10 × 2 = 20** |
| 18. | ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ ? | |
| | ***ಉತ್ತರ :*** | |
| | ವಿ.ಕೃ. ಗೋಕಾಕ್ ಅವರು ಲಂಡನ್ನಿನ ಬೀದಿಯಲ್ಲಿ ತಿರುಗಾಡುತ್ತಿದ್ದ ಅಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಗಳನ್ನು ಗಮನಿಸುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೇ ? ಒಬ್ಬ ಮನುಷ್ಯಳಂತೆ ಮತ್ತೊಬ್ಬಳಿಲ್ಲ ಎಂದು ಅಲ್ಲಿನ ಟೊಪ್ಪಿಗೆಗಳ ವಿಶೇಷತೆಯನ್ನು ದಾಖಲಿಸಿದ್ದಾರೆ. | |
| 19. | ನೆಹರೂ ಅವರು ವಿಶ್ವೇಶ್ವರಯ್ಯನವರನ್ನು ಕುರಿತು ಹೇಳಿದ ಮಾತುಗಳಾವುವು ? | |
| | ***ಉತ್ತರ :*** | |
| | "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಬೆಂಗಳೂರಿನಲ್ಲಿ ವಿಶ್ವೇಶ್ವರಯ್ಯನವರ ಜನ್ಮ ಶತಮಾನೋತ್ಸವದಂದು ನೆಹರೂರವರು ಹೇಳಿದ ಮಾತುಗಳಾಗಿವೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು ? ತಿಳಿಸಿ.<br>***ಉತ್ತರ :***<br>ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ವಿಶ್ವೇಶ್ವರಯ್ಯನವರು ನಂಬಿದ್ದರು. ಅದಕ್ಕಾಗಿ ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತು "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಮನಗಂಡು ಅವರು ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. | |
| 21. | ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?<br>***ಉತ್ತರ :***<br>ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ "ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ ? ಆ ಮನೆಯ ಒಳಗೆ ಏನು ಸಂಭವಿಸುತ್ತಿದೆ ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಗಡಿಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್‌ಔಟ್' ನಿಯಮ ಪಾಲಿಸುತ್ತಿರುವ ಈ ಸಮಯದಲ್ಲಿ ಆ ಮನೆಯ ಒಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ?" ಎಂಬ ಪ್ರಶ್ನೆಗಳು ಮೂಡಿದವು. | |
| 22. | ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕೆಂದು ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?<br>***ಉತ್ತರ :***<br>ಮನುಷ್ಯ ಸಮಾಜದಲ್ಲಿ ಮೇಲು-ಕೀಳು, ಜಾತಿ-ಮತ, ಧರ್ಮ-ಭಾಷೆ ಇತ್ಯಾದಿಗಳಲ್ಲಿ ಮುಳುಗಿ ಹೋಗಿದ್ದಾನೆ. ಮನುಷ್ಯರನ್ನು ಸಂಪರ್ಕಿಸದಂತೆ ಗೋಡೆ ಕಟ್ಟಿಕೊಂಡಿದ್ದಾನೆ. ಈ ಗೋಡೆಗಳನ್ನು ಕೆಡವಿ, ಇವರ ಜೀವನದಲ್ಲಿ ಹೊಸ ಭರವಸೆ ಮೂಡಿಸಬೇಕು ಒಬ್ಬರನ್ನೊಬ್ಬರು ಸಂಪರ್ಕಿಸುವಂತೆ ಸೇತುವೆಗಳನ್ನು ನಿರ್ಮಿಸಬೇಕು. ಯಾವುದೇ ಸವಾಲುಗಳು ಎದುರಾದರೂ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 23. | ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?<br>***ಉತ್ತರ :***<br>ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕ್ಷಣಕಾಲ ಏನನ್ನೂ ಉತ್ತರಿಸದ ಕರ್ಣ ನಂತರ ಕೃಷ್ಣನನ್ನು ಕುರಿತು 'ಹುಚ್ಚು ಕೃಷ್ಣ, ನಾನು ಈ ರಾಜ್ಯದ ಸಿರಿಗೆ ಸೋಲುವವನಲ್ಲ. ಕೌರವರು ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಮನಸ್ಸಿಲ್ಲ ನನ್ನನ್ನು ಕಾಪಾಡಿದ ಒಡೆಯನಿಗೆ ಪಾಂಡವರ ಶಿರಗಳನ್ನು ಕಡಿದು ತಂದೊಪ್ಪಿಸಬೇಕೆಂಬ ಆತುರದಲ್ಲಿದ್ದಾಗ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ' ಎಂದು ಹೇಳಿದನು. | |
| 24. | ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ ?<br>***ಉತ್ತರ :***<br>ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆಯೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ದೊರೆವುದೆಂದು ವಿವೇಕಾನಂದರು ಹೇಳಿದ್ದಾರೆ. | |
| 25. | ಭಗತ್‌ಸಿಂಗ್ ಹೇಗೆ ಅಮರನಾದನು ?<br>***ಉತ್ತರ :***<br>ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆದನು. "ಇಂಕ್ವಿಲಾಬ್ ಜಿಂದಾಬಾದ್" ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯಕ್ಕೋಸ್ಕರ ತನ್ನ ಜೀವವನ್ನೇ ಅರ್ಪಿಸಿ ಮರಣ ದಂಡನೆಗೆ ಈಡಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಗುರಿಯನ್ನು ತೋರಿಸಿಕೊಟ್ಟು ಪ್ರಾಣಾರ್ಪಣೆ ಮಾಡಿದ ಭಗತ್‌ಸಿಂಗ್ ತನ್ನ ತ್ಯಾಗ ಬಲಿದಾನದಿಂದ ಅಮರನಾದನು. | |
| 26. | 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ? | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :***<br>ಒಡೆಯನ ಅಂಗಳದಲ್ಲಿದ್ದ ಮಾವಿನ ಮರಗಳು ಮೈತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಬಿಚ್ಚಿ ಸ್ವಚ್ಛಂದವಾಗಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ವಸಂತನ ಆಗಮನದ ಹಿನ್ನೆಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | |
| 27. | ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ?<br>***ಉತ್ತರ :***<br>ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲು ಕುಡಿ ಎಂಬ ಬೂದುಬಣ್ಣದ ಗಿಡದ ಎಳೆಯ ಕುಡಿಯನ್ನು ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿ ನಂತರ ಎಣ್ಣೆಯಲ್ಲಿ ಅದ್ದಿದಾಗ ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗುತ್ತಿತ್ತು. ಇದನ್ನು ನಿತ್ಯ ಆರತಿಗೆ ಬಳಸುತ್ತಿದ್ದರು. ನಾಗಸಂಪಿಗೆ ಮರದ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಮಾಡಿ ದೀಪಾವಳಿ ಕಾರ್ತೀಕ ಮಾಸದಲ್ಲಿ ಉರಿಸುತ್ತಿದ್ದರು. ಜವಾರಿ ಹತ್ತಿ ಗಿಡಗಳು ಬಿಡುತ್ತಿದ್ದ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಹೀಗೆ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಸಾರಾ ಅಬೂಬಕ್ಕರ್ ***:***<br>***ಉತ್ತರ :*** | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಲೇಖಕಿ ಸಾರಾ ಅಬೂಬಕ್ಕರ್ ಅವರು ಸಾ.ಶ. ೧೯೩೬ ಜೂನ್ ೩೦ ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು 'ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ' – ಕಾದಂಬರಿಗಳನ್ನು, 'ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ' ಎಂಬ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ' ಪ್ರಶಸ್ತಿ ಲಭಿಸಿದೆ. | |
| 29. | ಕುವೆಂಪು **:** <br> ***ಉತ್ತರ :*** <br> 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ ಸಾ.ಶ. ೧೯೦೪ ರ ಡಿಸೆಂಬರ್ ೨೯ ರಂದು ಜನಿಸಿದರು. ಇವರು 'ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ' – ಕವನಸಂಕಲನಗಳು, 'ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು' – ಕಥಾಸಂಕಲನಗಳು. 'ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು' – ಕಾದಂಬರಿಗಳು. 'ತಪೋನಂದನ, ರಸೋವೈಸಃ' – ವಿಮರ್ಶಾ ಸಂಕಲನಗಳು. 'ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ ಎಂಬ ಮಕ್ಕಳ ಪುಸ್ತಕಗಳು. 'ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್' – ನಾಟಕಗಳು, 'ನೆನಪಿನ ದೋಣಿಯಲ್ಲಿ' – ಆತ್ಮಕಥನ 'ಶ್ರೀರಾಮಾಯಣದರ್ಶನಂ' ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ರಾಷ್ಟ್ರಕವಿ, ಪಂಪ ಪ್ರಶಸ್ತಿ, ಗೌರವ ಡಾಕ್ಟರೇಟ್ ಪುರಸ್ಕಾರಗಳು ದೊರೆತಿವೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VI.** | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | **1 × 3 = 3** |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 30. | ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿದೇಶದೊಳ್ | |

| ಭ | ರ | ನ | ಭ | ಭ | ರ | ಲ + ಗು |
|---|---|---|---|---|---|---|
| — U U | — U — | U U U | — U U | — U U | — U — | U — |
| ಕೋಗಿಲೆ | ಯಾಗಿ ಪು | ಟ್ಟುವುದು | ನಂದನ | ದೊಳ್ ವನ | ವಾಸಿ ದೇ | ಶದೊಳ್ |

ಛಂದಸ್ಸು : ಇದು ಅಕ್ಷರಗಣ ಛಂದಸ್ಸಿನ 'ಉತ್ಪಲಮಾಲಾ ವೃತ್ತ'ದ ಲಕ್ಷ್ಯವಾಗಿದೆ.

| | | |
|---|---|---|
| **VII.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

31. "ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು."

***ಉತ್ತರ :***

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ :* ಮನೋರಮೆಯ ಹಣೆ
*ಉಪಮಾನ :* ಬಾಲಚಂದ್ರ
*ಉಪಮಾವಾಚಕ :* ಅಂತೆ
*ಸಮಾನಧರ್ಮ :* ಆಕರ್ಷಣೀಯವಾಗಿರುವುದು

ಇಲ್ಲಿ ಉಪಮೇಯವಾದ 'ಮನೋರಮೆಯ ಹಣೆಯನ್ನು' ಉಪಮಾನವಾದ 'ಬಾಲಚಂದ್ರ' ನಿಗೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಆಕರ್ಷಣೀಯವಾಗಿರುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರ (ಪೂರ್ಣೋಪಮಾಲಂಕಾರ)ದ ಲಕ್ಷ್ಯವಾಗಿದೆ.

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VIII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.<br>**ಅಥವಾ**<br>ಅತಿ ಆಸೆ ಗತಿಗೇಡು. | |
| **IX.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ರಚಿಸಿರುವ 'ಕಾದಂಬರಿ' ಕೃತಿಯಿಂದ ಆಯ್ದ 'ಶುಕನಾಸನ ಉಪದೇಶ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಶುಕನಾಸನು ಯುವರಾಜನಾದ ಚಂದ್ರಾಪೀಡನಿಗೆ ಅತ್ಯಂತ ಜವಾಬ್ದಾರಿಯುತ ಮಂತ್ರಿಯಾಗಿ ಪ್ರಾಯೋಗಿಕ ಹಾಗೂ ಅನುಭವಗಮ್ಯವಾದ ಉಪದೇಶವನ್ನು ಹೇಳುತ್ತಾ, ಗುರೂಪದೇಶ ಎಂಬುದು 'ನೀರಿಲ್ಲದ ಮೀಹ, ಬೊಜ್ಜು ಬೆಳೆಯದೆ ಬರುವ ಗುರುತ್ವ, ಬೆಲೆಬಾಳುವ ಕಿವಿಯೋಲೆ, ಪಂಜು ಇಲ್ಲದೆ ಬೆಳಗುವ ಬೆಳಕು, ಉದ್ವೇಗ ಬರಿಸದ ಜಾಗರಣೆ ಎಂದು ಗುರೂಪದೇಶದ ಮಹತ್ವ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಮಾತಿನಂತೆ ಗುರೂಪದೇಶವು ಅತ್ಯಂತ ಮಹತ್ವದ್ದಾಗಿದ್ದು ಗುರೂಪದೇಶದಿಂದ ಬಾಳು ಬೆಳಗುತ್ತದೆ. ಧನಾತ್ಮಕ ಬದಲಾವಣೆಯಾಗುತ್ತದೆ ಎಂಬ ಮಹತ್ವ ಸಾರುವ ಈ ಸಾಲು ಅತ್ಯಂತ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 34. | "ಅವಂತಿ ಸುಕುಮಾರನೆಂದು ಪೆಸರನಿಟ್ಟಂ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿಯ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ವ್ಯಾಪಾರಿಯೋರ್ವ ರತ್ನಗಂಬಳಿಯನ್ನು ಮಾರಲು ರಾಜನಾದ ವೃಷಭಾಂಕ ಮತ್ತು ರಾಣಿ ಜ್ಯೋತಿರ್ಮಾಲೆಯರ ಬಳಿಗೆ ಹೋಗಿ ಅದರ ಬೆಲೆ ಲಕ್ಷದೀನಾರಗಳು ಎಂದಾಗ ಆತ ಕೊಳ್ಳಲಾರದೆ ಕಳುಹಿಸುತ್ತಾನೆ. ನಂತರ ಯಶೋಭದ್ರೆಯ ಬಳಿಗೆ ಹೋಗಿ ಆ ರತ್ನಗಂಬಳಿಯನ್ನು ತೋರಿಸಿದಾಗ ಲಕ್ಷದೀನಾರ ಕೊಟ್ಟು ರತ್ನಗಂಬಳಿಯನ್ನು ಕೊಂಡು ಮೂವತ್ತೆರಡು ತುಂಡುಗಳಾಗಿ ಮಾಡಿ ತನ್ನ ಸೊಸೆಯರಿಗೆ ನೀಡಿದಳು. ಅವರು ತಮ್ಮ ಪಾದುಕೆಗಳಲ್ಲಿ ಸಿಕ್ಕಿಸಿಕೊಂಡ ವಿಷಯ ತಿಳಿದ ರಾಜ ಯಶೋಭದ್ರೆಯ ಮನೆಗೆ ಹೋಗಬೇಕೆಂದು ಇಚ್ಚೆಸಿದಾಗ, ರಾಜನನ್ನು ಆಹ್ವಾನಿಸಿ ಯಶೋಭದ್ರೆ ಸಕಲ ವೈಭೋಗದಿಂದ ಸತ್ಕರಿಸಿದಳು. ಸುಕುಮಾರಸ್ವಾಮಿಯ ಆ ವೈಭೋಗವನ್ನು ಕಂಡು ರಾಜ ಅವನನ್ನು ಹೊಗಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಸಕಲ ಸುಖ ವೈಭೋಗದಿಂದ ಮೆರೆಯುತ್ತಿರುವ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸುಕುಮಾರಸ್ವಾಮಿಯನ್ನು ಕಂಡು ಇಂತಹ ಸೌಭಾಗ್ಯ ರಾಜನಾದ ತನ್ನ ಅರಮನೆಯಲ್ಲೂ ಇಲ್ಲ. ಸುಕುಮಾರಸ್ವಾಮಿಯಂತಹ ಭಾಗ್ಯವಂತ ಮತ್ತಾರೂ ಇಲ್ಲವೆಂದು ಹೊಗಳುವುದು ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 35. | ''ಕಿಱೆದುಪೊನ್ನಂ ತೆಗೆದುಕೊಳ್ವಂ'' | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ದುಷ್ಟಬುದ್ಧಿ ಧರ್ಮಬುದ್ಧಿಯವರಿಬ್ಬರೂ ವ್ಯಾಪಾರದಿಂದ ಸಂಪಾದಿಸಿಕೊಂಡು ಬಂದ ಹೊನ್ನನ್ನು ತಮಗೆ ವ್ಯಯಕ್ಕೆ ಬೇಕಾದಷ್ಟು ತೆಗೆದುಕೊಂಡು, ಉಳಿದ ಹೊನ್ನನ್ನು ವಟವೃಕ್ಷದ ಬುಡದಲ್ಲಿ ಹೂತಿಟ್ಟು ತಮ್ಮ ತಮ್ಮ ಮನೆಗೆ ತೆರಳಿದರು. ಕೆಲವು ದಿನಗಳ ನಂತರ ಧರ್ಮಬುದ್ಧಿಯನ್ನು ವಂಚಿಸಿ ದುಷ್ಟಬುದ್ಧಿ ಹೊನ್ನನ್ನು ಕದ್ದೊಯ್ಯುತ್ತಾನೆ. ನಂತರ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ಈ ಮೇಲಿನ ಮಾತನ್ನು ದುಷ್ಟಬುದ್ಧಿ ಹೇಳುತ್ತಾನೆ. | |
| | ***ಸ್ವಾರಸ್ಯ :*** ಆತ್ಮೀಯ ಗೆಳೆಯನಾದ ಧರ್ಮಬುದ್ಧಿಯನ್ನು ವಂಚಿಸುವ, ಮೋಸ ಮಾಡುವ, ದುಷ್ಟಬುದ್ಧಿಯ ಮಿತ್ರದ್ರೋಹ, ವಿಶ್ವಾಸದ್ರೋಹ, ದುಷ್ಟತನ, ಅವನಲ್ಲಿರುವ ದುರ್ಗುಣಗಳು ಅವನ ಹೆಸರಿಗೆ ತಕ್ಕಂತೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 36. | ''ಹರಿಯ ಹಗೆ ಹೊಗೆದೋರದುರುಹದೆ ಬರಿದೆ ಹೋಹುದೆ'' | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಕುಮಾರವ್ಯಾಸ ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ' ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಕರ್ಣನನ್ನು ಯುದ್ಧದಿಂದ ವಿಮುಖಗೊಳಿಸಬೇಕೆಂದು ಪಣತೊಟ್ಟ ಕೃಷ್ಣನು ಕರ್ಣನಿಗೆ ಅವನ ಜನ್ಮ ರಹಸ್ಯವನ್ನು ತಿಳಿಸಿ ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ, ಎಡಬಲದಲ್ಲಿ ಪಾಂಡವ ಕೌರವರು, ಎದುರಲಿ ಮಾದ್ರ, ಮಾಗಧ, ಯಾದವಾದಿಗಳು ಇರುತ್ತಾರೆ ಎಂದು ಹೇಳಿದಾಗ ಕರ್ಣನಿಗೆ ಕೃಷ್ಣನ ಕುತಂತ್ರ ಅರಿಯಲಾಗದೆ ಮನಸ್ಸಿನಲ್ಲಿಯೇ ಕೃಷ್ಣನ ತಂತ್ರದ ಫಲ ಏನಾಗಬಹುದು ಎಂದು ಕರ್ಣನು ಊಹಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ದಾನಶೂರ ಕರ್ಣನು ಯುದ್ಧದಿಂದ ವಿಮುಖನಾದರೆ ಪಾಂಡವರಿಗೆ ಜಯ ಸಾಧ್ಯ ಎಂಬುದನ್ನು ಅರಿತಿದ್ದ ಶ್ರೀಕೃಷ್ಣನು ಭೇದ ತಂತ್ರದ ಮೂಲಕ ಕರ್ಣನ ಜನ್ಮರಹಸ್ಯ ತಿಳಿಸಿ ಕರ್ಣನ ಬಲ ಕುಗ್ಗಿಸಿ ದುರ್ಯೋಧನನ ಶಕ್ತಿ ಕುಗ್ಗುವಂತೆ ಮಾಡುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |
| 37. | "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ರನ್ನ ಕವಿ ವಿರಚಿತ 'ಸಾಹಸ ಭೀಮ ವಿಜಯಂ' ಮಹಾಕಾವ್ಯದಿಂದ ಆಯ್ದ 'ಛಲಮನೆ ಮೆರೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬಾಳಲು ನೀಡಿದ ಭೀಷ್ಮರ ಸಲಹೆಯನ್ನು ತಿರಸ್ಕರಿಸಿದ ದುರ್ಯೋಧನ ತಾನು ನೆಲಕ್ಕಾಗಿ ಹೋರಾಡುತ್ತಿಲ್ಲ ಛಲಕ್ಕಾಗಿ ಹೋರಾಡುತ್ತೇನೆ. ಕರ್ಣನನ್ನು ಕೊಲ್ಲಿಸಿದ ಈ ಭೂಮಿ ನನಗೆ ಹಾಳು ಭೂಮಿ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** ತನ್ನ ಸಹೋದರ ಮತ್ತು ಸ್ನೇಹಿತನನ್ನು ಕೊಂದ ಭೀಮಾರ್ಜುನರ ಮೇಲಿದ್ದ ಕೋಪ, ಯುದ್ಧವನ್ನು ಮಾಡಿಯೇ ತೀರಬೇಕೆಂಬ ದುರ್ಯೋಧನನ ಛಲದ ಗುಣ ಅವನ ಸ್ವಭಾವಕ್ಕೆ ತಕ್ಕುದಾಗಿ ಮೂಡಿ ಬಂದಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 38. | "ವಿದ್ಯಾಧನಮೆ ಧನಮಪ್ಪುದು" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಆದಿಕವಿ ಪಂಪ ವಿರಚಿತ 'ವಿಕ್ರಮಾರ್ಜುನ ವಿಜಯಂ' ಕಾವ್ಯದಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ದ್ರೋಣಾಚಾರ್ಯರಿಗೆ ಬಡತನ ಬಂದಿದ್ದರಿಂದ ಅಶ್ವತ್ಥಾಮನೊಂದಿಗೆ ಪರಶುರಾಮರ ಬಳಿಗೆ ಸಂಪತ್ತನ್ನು ಬೇಡಲು ಬರುತ್ತಾರೆ. ಆ ವೇಳೆಗೆ ಪರಶುರಾಮನು ತನ್ನಲ್ಲಿದ್ದ ಸಕಲವನ್ನೂ ಬೇಡಿದವರಿಗೆ ಮತ್ತು ಭೂಮಿಯನ್ನು ಗುರುಗಳಿಗೆ ದಾನಮಾಡಿ ಜಟಾಧಾರಿಯಾಗಿ ನಾರುಮಡಿಯನ್ನುಟ್ಟು ತಪೋವನಕ್ಕೆ ಹೋಗಲು ಸಿದ್ಧನಾಗಿದ್ದನು. ಈಗ ನನ್ನ ಬಳಿಯಿರುವುದು ಕೇವಲ ಬಿಲ್ಲು ಮತ್ತು ಬಾಣಗಳ ಸಮೂಹ ಮಾತ್ರ ಎಂದು ಹೇಳುತ್ತಾನೆ. ಈ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ. | |
| | ***ಸ್ವಾರಸ್ಯ :*** ಎಲ್ಲಾ ಸಂಪಾದನೆಗಿಂತ ಶ್ರೇಷ್ಠವಾದದ್ದು ವಿದ್ಯೆ. ವಿದ್ಯೆಯಿಂದ ಸಂಪತ್ತನ್ನು ಗಳಿಸಬಹುದು. ಶ್ರೇಷ್ಠವಾದ ವಿದ್ಯೆಯನ್ನು ಸಂಪತ್ತು ಎಂದು ಭಾವಿಸಿ ಬೇಡಿರುವುದು ಔಚಿತ್ಯಪೂರ್ಣವಾಗಿ ಮೂಡಿಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **X.** | **ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :** | **1 × 4 = 4** |
| 39. | ನೀಲಮೇಘಮಂಡಲ– ..........................................<br>.....................................................................<br>.....................................................................<br>............................................................. ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ..............................................<br>.....................................................................<br>.....................................................................<br>............................................................. ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಉತ್ತರ :***<br>ನೀಲಮೇಘಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ? | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | **ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।<br>ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।<br>ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥<br>ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।<br>ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।<br>ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥<br>***ಉತ್ತರ :***<br>ಪ್ರಸ್ತುತ ಪದ್ಯಭಾಗವನ್ನು ಲಕ್ಷ್ಮೀಶ ಕವಿ ರಚಿಸಿರುವ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಬ್ರಹ್ಮಹತ್ಯಾ ದೋಷದ ಪರಿಹಾರಕ್ಕಾಗಿ ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆ ದೇಶದೆಲ್ಲೆಡೆ ಸಂಚರಿಸುತ್ತಿರುವಾಗ ರಾಜ ಮಹಾರಾಜರೆಲ್ಲ ಅದನ್ನು ಕಟ್ಟಲಾರದೆ ನಮಿಸಿ ಕಳುಹಿಸುತ್ತಾರೆ. ವರುಣ ಲೋಕಕ್ಕೆ ತೆರಳುವ ಮುನ್ನ ವಾಲ್ಮೀಕಿ ಮಹರ್ಷಿಗಳು ಲವನನ್ನು ತೋಟದ ಕಾವಲಿಗೆ ನೇಮಿಸುತ್ತಾರೆ. ಲವ ತನ್ನ ಸ್ನೇಹಿತರೊಡನೆ ಆಟವಾಡುತ್ತಿದ್ದಾಗ ಕುದುರೆ ವಾಲ್ಮೀಕಿ ಋಷಿಯ ಆಶ್ರಮದ ತೋಟವನ್ನು ಚೆನ್ನಾಗಿ ತುಳಿಯುತ್ತಿರುವುದನ್ನು ಕಂಡು ಕುದುರೆಯ ಬಳಿಗೆ ಬಂದು ಕುದುರೆಯ ಹಣೆಯ ಮೇಲೆ ಹೊಳೆವ ಪಟ್ಟದ ಲಿಖಿತವನ್ನು ಕಂಡು ಓದಿಕೊಳ್ಳುತ್ತಾನೆ. ಸಮರ್ಥರಾದವರು ಯಾರಾದರೂ ಇದ್ದರೆ ಕುದುರೆಯನ್ನು ತಡೆಯಿರಿ ಎಂದಿದ್ದ ಲೇಖನವನ್ನು ಓದಿ ಈ ರಾಮನ ಗರ್ವವನ್ನು ಬಿಡಿಸಬೇಕೆಂದು ತನ್ನ ಉತ್ತರೀಯದಿಂದ ಕುದುರೆಯ ಕುತ್ತಿಗೆಗೆ ಬಿಗಿದು ಬಾಳೆಗಿಡಕ್ಕೆ ಕಟ್ಟುತ್ತಾನೆ. ಇದನ್ನು ನೋಡಿದ ಋಷಿ ಪುತ್ರರು ಹೆದರಿ ನಡುಗಿ ಬೇಡಬೇಡ ಅರಸರ ಕುದುರೆಯನ್ನು ಬಿಡು ಇಲ್ಲದಿದ್ದರೆ ನಮ್ಮನ್ನು | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಡಿವರು ಎಂದು ಹೇಳಿದಾಗ, ಲವನು ಪಾರ್ವರ ಮಕ್ಕಳು ಹೆದರಿದರೆ ಜಾನಕಿಯ ಮಗನಿದಕ್ಕೆ ಹೆದರುವುದಿಲ್ಲ ನೀವು ಇಲ್ಲಿಂದ ಹೊರಟುಹೋಗಿ ಎಂದು ಶೌರ್ಯದಿಂದ ಬಿಲ್ಲನ್ನು ಸಿದ್ಧಪಡಿಸಿ ಜೇಗೈದು ನಿಲ್ಲುತ್ತಾನೆ. | |
| | ಲವನು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ ವೀರತೆಯಿಂದ ಕುದುರೆಯನ್ನು ಕಟ್ಟುತ್ತಾನೆ ಕಷ್ಟ ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೊರಗದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿ ಹಾಗೂ ಋಷಿ ಪುತ್ರರ ಸಾಧು ಸ್ವಭಾವ, ಲವನ ಕ್ಷಾತ್ರಗುಣ, ಸೀತೆ ಲವನನ್ನು ಬೆಳೆಸಿದ ರೀತಿ ಇಲ್ಲಿ ಅಡಕವಾಗಿರುವ ಮೌಲ್ಯವಾಗಿದೆ. | |
| **XII.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **2 × 4 = 8** |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | 'ತಾಳಿದವನು ಬಾಳಿಯಾನು' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ? ವಿವರಿಸಿ. | |
| | **ಅಥವಾ** | |
| | ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಮತಂಗಾಶ್ರಮದಲ್ಲಿ ವಾಸವಿದ್ದ ಪರಮ ರಾಮಭಕ್ತೆಯಾದ ಶಬರಿಯು ತಮ್ಮ ಗುರುಗಳ ಕಾಲಾನಂತರ ರಾಮನ ದರ್ಶನದ ನಿರೀಕ್ಷೆಯಲ್ಲಿ ಸದಾ ರಾಮ ಜಪ ಮಾಡುತ್ತಾ ಹಲವಾರು ವರ್ಷಗಳ ಕಾಲ ರಾಮನ ಬರುವಿಕೆಯ ಭರವಸೆಯಿಂದ ರಾಮನಿಗಾಗಿ ಪ್ರತಿನಿತ್ಯ ಹೂವು, ಹಣ್ಣು, ಮಧುಪರ್ಕ, ಮಾಲೆಯನ್ನು ಕಟ್ಟಿ ವೇದಿಯನ್ನು ಶೃಂಗರಿಸುತ್ತಾ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸ್ವಲ್ಪವೂ ಬೇಸರಗೊಳ್ಳದೆ ಪ್ರತಿನಿತ್ಯ ಶ್ರದ್ಧೆಯಿಂದ ರಾಮನಿಗಾಗಿ ಕಾತರಿಸಿ ಕಾಯುತ್ತಿದ್ದಳು. ಅತ್ಯಂತ ವೃದ್ಧೆಯಾದರೂ ರಾಮನ ಬರುವಿಕೆಯ ಭರವಸೆಯಿಂದ ರಾಮಧ್ಯಾನದಲ್ಲಿದ್ದಾಗ ವನವಾಸದಲ್ಲಿದ್ದ ಶ್ರೀರಾಮನು ಸೀತೆಯನ್ನು ಕಳೆದುಕೊಂಡು, ಆಕೆಯನ್ನು ಹುಡುಕುತ್ತಾ ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಕಬಂಧ ರಾಕ್ಷಸ ಅಡ್ಡ ಬಂದಾಗ ಆತನನ್ನು ಸಂಹರಿಸಿ ಮುಕ್ತಿ ನೀಡಿ ಆತನಿಂದ ಸುಗ್ರೀವ ಮತ್ತು ತಮಗಾಗಿ ಕಾಯುತ್ತಿರುವ ಶಬರಿಯ ಬಗ್ಗೆ ತಿಳಿದು ಶಬರಿಯನ್ನು ಅರಸಿ ಮತಂಗಾಶ್ರಮಕ್ಕೆ ಬರುತ್ತಾರೆ. ಅಲ್ಲಿ ರಾಮನ ಬರುವಿಕೆಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿರುವ ಶಬರಿಯನ್ನು ಕಂಡು ಅವಳಿಗೆ ದರ್ಶನವನ್ನು ನೀಡುತ್ತಾರೆ. ರಾಮಲಕ್ಷ್ಮಣರ ದರ್ಶನದಿಂದ ಪುನೀತಳಾದ ಶಬರಿಯು ರಾಮಲಕ್ಷ್ಮಣರನ್ನು ಅತ್ಯಂತ ಆದರದಿಂದ ಸತ್ಕರಿಸಿ ತನ್ನ ಮನದ ಬಯಕೆಯನ್ನು ಬಹುಕಾಲದ ಸಂಕಲ್ಪವನ್ನು ಪೂರೈಸಿಕೊಳ್ಳುತ್ತಾಳೆ. ಕೊನೆಗೆ ರಾಮಲಕ್ಷ್ಮಣರಿಂದ ಮುಕ್ತಿಯನ್ನು ಪಡೆದುಕೊಳ್ಳುತ್ತಾಳೆ. ಹೀಗೆ ಶಬರಿಯು 'ತಾಳಿದವನು ಬಾಳಿಯಾನು' ಎಂಬ ಮಾತಿನಂತೆ ಸುದೀರ್ಘಕಾಲ ಕಾಯ್ದು ರಾಮನ ದರ್ಶನ ಪಡೆದದ್ದು ಅವಳ ತಾಳ್ಮೆ ಮತ್ತು ನಂಬಿಕೆಗೆ ಸಾಕ್ಷಿ ಎನ್ನುವಂತಿದೆ. <br><br> **ಅಥವಾ** <br><br> 'ನಂಬಿ ಕೆಟ್ಟವರಿಲ್ಲ' ಎಂಬ ಮಾತಿನಂತೆ ಅಯೋಧ್ಯಾ ಪುರುಷ ರಾಮನ ದರ್ಶನವೇ ಬಾಳಿನ ಅತಿದೊಡ್ಡ ಮತ್ತು ಅಂತಿಮ ಆಸೆಯೆಂದು ಕಾಯುತ್ತಿದ್ದ ಮತಾಂಗಾಶ್ರಮದ ವಾಸಿ ಪ್ರೇಮಶುದ್ಧೆ ಶಬರಿಯು ಅನಂತ ಕಾಲದಿಂದ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು. ರಾಮಬಾರದೆ ನನಗೇನು ತೋರದೆ ಎನ್ನುತ್ತಾ ರಾಮಜಪವನ್ನು ನಿಷ್ಠೆಯಿಂದ ಭಜಿಸುತ್ತಿದ್ದಳು. ಒಮ್ಮೆ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. ಆಗ ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆಧರಿಸಿ, ಆನಂದಿಸಿ ಮಾತೃಭಾವದಿಂದ ಸೇವೆಯನ್ನು ಮಾಡಿ ತೃಪ್ತಳಾಗಿ ತನ್ನ ಮನದ ಇಂಗಿತವನ್ನು ಪೂರೈಸಿಕೊಂಡು ಭಕ್ತಿಯ ಶಕ್ತಿಯನ್ನು ಜಗತ್ತಿಗೆ ಸಾರಿ ಹೇಳಿದ ಶಬರಿಯು 'ತಾಳಿದವನು ಬಾಳಿಯಾನು' ಎಂಬ ಮಾತಿನಂತೆ ತನ್ನ ಪರಿಶುದ್ಧ ಪ್ರೇಮ ಭಕ್ತಿಯಿಂದ ಮತಂಗ ಮುನಿಗಳು ಹೇಳಿದ ಮಾತಿನಂತೆ ರಾಮದರ್ಶನ ಮಾಡಿ ನಂತರ ಅವರಿಂದಲೇ ಮುಕ್ತಿಯನ್ನು ಪಡೆದ ಪರಿ ಗುರುಗಳ ಮೇಲಿದ್ದ ನಂಬಿಕೆ, ವಿಶ್ವಾಸ ಹುಸಿಯಾಗಲಿಲ್ಲ. ಎಂಬುದು ಶಬರಿ ಗೀತನಾಟಕದಲ್ಲಿ ಸೊಗಸಾಗಿ ಮೂಡಿಬಂದಿದೆ. ಹೀಗೆ ಧನ್ಯತೆಯ ಭಾವನೆಯಿಂದ ಮುಕ್ತಿ ಬಯಸಿದ ಶಬರಿಯ ಚಿಂತೆ ಹಿಂಗಿಹೋಯಿತು. | |
| 42. | ಹಲಗಲಿ ದಂಗೆಯ ಪರಿಣಾಮವೇನು ? ವಿವರಿಸಿ.<br>**ಅಥವಾ**<br>ಹಲಗಲಿ ದಂಗೆಗೆ ಕಾರಣವಾದ ಅಂಶಗಳು ಮತ್ತು ಬ್ರಿಟಿಷ್ ಸರ್ಕಾರ ನಿಯಂತ್ರಿಸಿದ ಬಗೆಯನ್ನು ಕುರಿತು ಬರೆಯಿರಿ.<br>***ಉತ್ತರ :***<br>ಸ್ವಾತಂತ್ರ್ಯ ವೀರ ಹೋರಾಟಗಾರರು. ಸ್ವಾಭಿಮಾನಿಗಳೂ ಆದ ಹಲಗಲಿ ಬೇಡರು ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತದ ಮೇಲೆ 'ನಿಶ್ಶಸ್ತ್ರೀಕರಣ' ಕಾಯ್ದೆಯನ್ನು ಜಾರಿಗೆ ತಂದರು. ಹನುಮ, ಬಾಲ, ಜಡಗ, ರಾಮ ಮುಂತಾದ ಹಲಗಲಿಯ ಪ್ರಮುಖ ಬೇಡರು ನಿಶ್ಶಸ್ತ್ರೀಕರಣ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ. ಸಿಪಾಯಿಗೆ ಕಪಾಳಕ್ಕೆ ಹೊಡೆದು ಕಳುಹಿಸುತ್ತಾರೆ. ಈ ದುಃಖದ ಸುದ್ದಿ ತಿಳಿದು ಬ್ರಿಟಿಷ್ ಅಧಿಕಾರಿ ಸಿಟ್ಟಿನಿಂದ ಕುದುರೆಯೊಂದಿಗೆ ಸೈನಿಕರನ್ನು ಹಲಗಲಿಯ ಮೇಲೆ ಕಳುಹಿಸುತ್ತಾನೆ. ಆ ಸಂದರ್ಭದಲ್ಲಿ ಬ್ರಿಟಿಷ್ ಸೈನಿಕರು ಮತ್ತು ಹಲಗಲಿಯ ಹೋರಾಟಗಾರರ ನಡುವೆ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭೀಕರ ಯುದ್ಧ ನಡೆಯುತ್ತದೆ. ಸಿಕ್ಕ ಸಿಕ್ಕ ಜನರ ಮೇಲೆ ಕರುಣೆಯಿಲ್ಲದ ಹಾಗೆ ಬ್ರಿಟಿಷ್ ಸೈನ್ಯ ಗುಂಡು ಹಾರಿಸುತ್ತದೆ. ಹೆಬಲಕ್ ಸಾಹೇಬ ಬಂದು ಬುದ್ಧಿಮಾತು ಹೇಳುತ್ತಾನೆ. ಆದರೂ ಇವನ ಮಾತನ್ನು ನಂಬಲಿಲ್ಲ ಇವರು ಘಾತುಕರು ಎನ್ನುತ್ತಾ ಹೆಬಲಕ್ ಸಾಹೇಬರಿಗೆ ಗುಂಡು ಹೊಡೆದು ಕೊಲ್ಲುತ್ತಾರೆ. ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುತ್ತದೆ. ಈ ಕಾರಣದಿಂದ ಕಾರ ಸಾಹೇಬ ದೊಡ್ಡ ದಂಡನ್ನು ಹಲಗಲಿಗೆ ಕರೆಸಿಕೊಂಡು ಹಲಗಲಿಯ ಮೇಲೆ ದಾಳಿ ಮಾಡಿಸುತ್ತಾನೆ. ಹಲಗಲಿಯ ಹೋರಾಟಗಾರರು ಮುನ್ನೂರು, ಐನೂರು, ಸಾವಿರ ಮಂದಿಗೆ ಒಬ್ಬೊಬ್ಬರು ಎದುರಾಗಿ ನಿಲ್ಲುತ್ತಾರೆ. ಕುದುರೆಗಳನ್ನು ಕಡಿಯುತ್ತಾರೆ. ರಕ್ತದ ಕಾಲುವೆಯೇ ಹರಿಯುತ್ತದೆ. ಹೀಗೆ ಹೋರಾಡುತ್ತಲೇ ವೀರಮರಣ ಹೊಂದುತ್ತಾರೆ. ಬ್ರಿಟಿಷ್ ಸೈನ್ಯ ಸಿಕ್ಕದ್ದನ್ನೆಲ್ಲ ದೋಚಿಕೊಂಡು ಹಲಗಲಿಯನ್ನು ಸುಟ್ಟು ಗುರುತುಳಿಯದಂತೆ ಮಾಡುತ್ತಾರೆ. | |
| | **ಅಥವಾ** | |
| | ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರಕಾರ ಭಾರತೀಯರ ಮೇಲೆ 'ನಿಶ್ಶಸ್ತ್ರೀಕರಣ' ಆದೇಶವನ್ನು ಹೊರಡಿಸಿತು. ಆಯುಧಗಳಿಲ್ಲದೆ ಬದುಕು ನಡೆಸುವುದು ಕಷ್ಟ ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನು ಕೊಡಲೊಪ್ಪದೆ ಪ್ರಮುಖವಾಗಿ ಬಾಲ, ಹನುಮ, ಜಡಗ, ಭೀಮ ಇವರು ಹಲಗಲಿಯ ಬೇಡರನ್ನೆಲ್ಲ ಒಟ್ಟುಗೂಡಿಸಿ ತಾವೇ ಮುಂದೆ ನಿಂತು ಜೀವ ಹೋದರೂ ಶಸ್ತ್ರಾಸ್ತ್ರ ಒಪ್ಪಿಸೆವು ಎಂದು ಹೋರಾಟಕ್ಕೆ ಸನ್ನದ್ಧರಾಗುತ್ತಾರೆ. ಆದೇಶ ತಂದ ಕಂಪನಿ ಸರಕಾರದ ಸಿಪಾಯಿಯನ್ನು ಬೇಡರು ಹೊಡೆಯುತ್ತಾರೆ. ಈ ಸುದ್ದಿ ಸಾಹೇಬರಿಗೆ ತಲುಪಿ ಕೋಪದಿಂದ ದಂಡು ಕಳಿಸಿ ಹಲಗಲಿಯ ಮೇಲೆ ಗುಂಡಿನ ಮಳೆಗರೆದರು. ಬೆನ್ನುಹತ್ತಿ ಹೊಡೆದರು. ನಿಷ್ಕರುಣೆಯಿಂದ ಕೊಂದು ಹಾಕುತ್ತಾರೆ. ಕೋಪಗೊಂಡ ಬ್ರಿಟಿಷ್ ಅಧಿಕಾರಿ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹಲಗಲಿಯನ್ನು ಲೂಟಿ ಮಾಡಲು ಆದೇಶ ನೀಡುತ್ತಾನೆ. ಧೈರ್ಯದಿಂದ ಎದೆಗುಂದದೆ ಸಾವಿರ ಸಾವಿರ ಬ್ರಿಟಿಷರ ಸೈನಿಕರನ್ನು ಹಲಗಲಿಯ ಬೇಡರು ಎದುರಿಸುತ್ತಾರೆ. ಧೈರ್ಯದಿಂದ ಎದೆಗುಂದದೆ ವೀರಾವೇಶದಿಂದ ಹೋರಾಡಿ ವೀರಮರಣ ಹೊಂದುತ್ತಾರೆ. ಇಷ್ಟಕ್ಕೆ ಸುಮ್ಮನಾಗದ ಬ್ರಿಟಿಷ್ ಸೈನಿಕರು ದಿನಬಳಕೆಯ ವಸ್ತುಗಳನ್ನು ಬಿಡದೆ ದೋಚಿಕೊಂಡು ಊರಿಗೆ ಕೊಳ್ಳಿ ಇಟ್ಟು ಹಲಗಲಿಯನ್ನು ಬೂದಿ ಮಾಡಿ ಬಿಡುತ್ತಾರೆ. ಹೀಗೆ ಬ್ರಿಟಿಷ್ ಸರ್ಕಾರ ಹಲಗಲಿ ಬೇಡರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿತು. | |
| **XIII.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :** | **1 × 4 = 4** **( 2 + 2 )** |
| 43. | ವೇಳೆಯ ಅಪವ್ಯಯ ಅಂಬೇಡ್ಕರರಿಗೆ ಅಪರಾಧವಾಗಿ ಕಾಣುತ್ತಿತ್ತು. ಒಂದು ಕ್ಷಣವನ್ನೂ ಅವರು ಅಪವ್ಯಯ ಮಾಡುತ್ತಿರಲಿಲ್ಲ. ವ್ಯಾಪಾರಿಗೆ ವೇಳೆ ಎಂದರೆ ಹಣ. ಅಂಬೇಡ್ಕರರಿಗೆ ವೇಳೆ ಎಂದರೆ ಜ್ಞಾನಾರ್ಜನೆ. ತಮ್ಮ ಬದುಕಿನ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದ ನಮ್ಮ ಕಾಲದ ಇಬ್ಬರು ಮಹನೀಯರೆಂದರೆ ಒಬ್ಬರು ಗಾಂಧೀಜಿ ಮತ್ತೊಬ್ಬರು ಅಂಬೇಡ್ಕರರು. ಕಳೆದ ಕ್ಷಣ ಕಳೆದೇ ಹೋಗುತ್ತದೆಂಬ ಅರಿವು ಅವರದಾಗಿತ್ತು. ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಹೇಗೋ ಹಾಗೆ ಹಿಂತಿರುಗಿ ಸಾರ್ವಜನಿಕ ಜೀವನದಲ್ಲಿ ತೊಡಗಿದ ಮೇಲೆಯೂ ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ; ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು. ಅನೇಕ ಸಲ ರಾತ್ರಿಯುದ್ದಕ್ಕೂ ಅವರು ಓದು ಬರೆಹಗಳಲ್ಲಿ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತೊಡಗಿರುತ್ತಿದ್ದುದ್ದುಂಟು. ಅವರ ನೆಚ್ಚಿನ ನಾಯಿ ಬೆಳಗಿನ ನೇವರಿಕೆಗಾಗಿ ಬಂದು ಕಾಲಬಳಿ ಸುಳಿದಾಗಲೆ ರಾತ್ರಿ ಕಳೆದುಹೋದ ಅರಿವು ಅವರಿಗಾದದ್ದುಂಟು. ರಾತ್ರಿ ಮನೆಗೆ ಹೋಗುತ್ತೇನೆಂದು ಹೇಳಿ ಹೊರಟುಹೋದ ಕಾರ್ಯದರ್ಶಿ ಬೆಳಗಿನಲ್ಲಿ ಮತ್ತೆ ಬಂದಾಗ ಮನೆಗೇಕೆ ಇನ್ನೂ ಹೋಗಲಿಲ್ಲ ಎಂದು ಕೇಳಿದ್ದುಂಟು. ಅಂಥ ಏಕಾಗ್ರತೆಯ ಓದು ಬರೆಹ ಅವರದು. ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.<br>***ಪ್ರಶ್ನೆಗಳು :***<br>ಅ) ಅಂಬೇಡ್ಕರರ ಜ್ಞಾನದಾಹ ಹೇಗಿತ್ತು ?<br>ಬ) ಅಂಬೇಡ್ಕರರು ತಮ್ಮ ಬಿಡುವಿನ ಸಮಯವನ್ನು ಹೇಗೆ ಕಳೆಯುತ್ತಿದ್ದರು ?<br>***ಉತ್ತರ :***<br>ಅ) ಅಂಬೇಡ್ಕರರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.<br>ಬ) ಅಂಬೇಡ್ಕರರು ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ; ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು. ಅನೇಕ ಸಲ ರಾತ್ರಿಯುದ್ದಕ್ಕೂ ಅವರು ಓದು ಬರೆಹಗಳಲ್ಲಿ ತೊಡಗಿರುತ್ತಿದ್ದುದ್ದುಂಟು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 44. | ನಿಮ್ಮನ್ನು ಧಾರವಾಡದ ನಿವಾಸಿ 'ಹರ್ಷಿತಾ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯ' ನಿರ್ಮಿಸಿಕೊಡುವಂತೆ ಕೋರಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ಅಥರ್ವ' ಎಂದು ಭಾವಿಸಿಕೊಂಡು, 'ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ' ಕಾರ್ಯಕ್ರಮವನ್ನು ವಿವರಿಸಿ, ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸಿದ್ಧಾಂತ್' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಗೆಳೆಯನಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **XV.** | **ಪ್ರಬಂಧ ಬರೆವಣಿಗೆ :** | **1 × 5 = 5** |
| 45. | ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯರ ಸಾಧನೆ. | |
| | **ಅಥವಾ** | |
| | ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |

# ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ 2023

## ಪ್ರಥಮ ಭಾಷೆ – ಕನ್ನಡ (01K) – ಮಾದರಿ ಉತ್ತರಗಳು

---

**I** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. **6 x 1 = 6**

1. **'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

(ಎ) ಗುಣ ಸಂಧಿ
(ಬಿ) ಜಶ್ತ್ವ ಸಂಧಿ
(ಸಿ) ವೃದ್ಧಿ ಸಂಧಿ
(ಡಿ) ಶ್ಚುತ್ವ ಸಂಧಿ

**ಉತ್ತರ : (ಬಿ) ಜಶ್ತ್ವ ಸಂಧಿ** ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 193

2. **ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ**

(ಎ) ಉದ್ಧರಣ ಚಿಹ್ನೆ
(ಬಿ) ವಾಕ್ಯವೇಷ್ಟನ ಚಿಹ್ನೆ
(ಸಿ) ಆವರಣ ಚಿಹ್ನೆ
(ಡಿ) ವಿವರಣಾತ್ಮಕ ಚಿಹ್ನೆ

**ಉತ್ತರ : (ಸಿ) ಆವರಣ ಚಿಹ್ನೆ** ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 206

3. **'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

(ಎ) ತತ್ಪುರುಷ ಸಮಾಸ
(ಬಿ) ದ್ವಿಗು ಸಮಾಸ
(ಸಿ) ಅಂಶಿ ಸಮಾಸ
(ಡಿ) ಕ್ರಿಯಾ ಸಮಾಸ

**ಉತ್ತರ : (ಎ) ತತ್ಪುರುಷ ಸಮಾಸ** ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 194

4. **'ಮಾಡು' ಧಾತುವಿನ ವಿಧ್ಯರ್ಥಕ ರೂಪ**

(ಎ) ಮಾಡೇವು
(ಬಿ) ಮಾಡಿಯಾರು
(ಸಿ) ಮಾಡರು
(ಡಿ) ಮಾಡಲಿ

**ಉತ್ತರ : (ಡಿ) ಮಾಡಲಿ** ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 188

ಜ್ಞಾನದೀಪ ಕನ್ನಡ ನೋಟ್ಸ್

**5. 'ಸಾವಿತ್ರಿಗೆ' ಈ ಪದದಲ್ಲಿರುವ ವಿಭಕ್ತಿ**

(ಎ) ಪ್ರಥಮಾ

(ಬಿ) ದ್ವಿತೀಯಾ

(ಸಿ) ತೃತೀಯಾ

(ಡಿ) ಚತುರ್ಥಿ

**ಉತ್ತರ : (ಡಿ) ಚತುರ್ಥಿ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 186**

**6. 'ಧಗಧಗ' ಪದವು ಈ ಅವ್ಯಯಕ್ಕೆ ಸೇರಿದೆ**

(ಎ) ಸಾಮಾನ್ಯಾರ್ಥಕಾವ್ಯಯ

(ಬಿ) ಅನುಕರಣಾವ್ಯಯ

(ಸಿ) ಭಾವಸೂಚಕಾವ್ಯಯ

(ಡಿ) ಕ್ರಿಯಾರ್ಥಕಾವ್ಯಯ

**ಉತ್ತರ : (ಬಿ) ಅನುಕರಣಾವ್ಯಯ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 201**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 × 1 = 4**

**7.** ವರ್ಗೀಯ ವ್ಯಂಜನಾಕ್ಷರಗಳು : 25 : : ಅವರ್ಗೀಯ ವ್ಯಂಜನಾಕ್ಷರಗಳು : ________

ಉತ್ತರ : 09 **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 184**

**8.** ಹಾಲ್ಜೇನು: ಜೋಡುನುಡಿ : : ಬೇಡಬೇಡ : ________

ಉತ್ತರ : ದ್ವಿರುಕ್ತಿ **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 201**

**9.** ಪರ್ವತ : ರೂಢನಾಮ : : ಧರ್ಮರಾಯ : ________

ಉತ್ತರ : ಅಂಕಿತನಾಮ **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 185**

**10.** ಮ್ಯಾಗ : ಮೇಲೆ : : ಸಕ್ಕಾರಿ : ________

ಉತ್ತರ : ಸಕ್ಕರೆ **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 200**

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 × 1 = 7**

11. **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**

**ಉತ್ತರ:** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 5**

ಜ್ಞಾನದೀಪ ಟಾರ್ಗೆಟ್ 100 ಕನ್ನಡ ನೋಟ್ಸ್

12. **ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 26**

**ಉತ್ತರ:** ಹಿತವಚನವು ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ಮನಸ್ಸಿನ ಕೊಳೆಯನ್ನೆಲ್ಲ ತೊಳೆಯುತ್ತದೆ.

**13. ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಾವುದು?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 63**

**ಉತ್ತರ:** ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ 'ಯಜ್ಞ'.

**14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**

**ಉತ್ತರ:** ಧರ್ಮಬುದ್ಧಿಯು ದೇವರು, ಗುರುಗಳು, ವೇದಾಧ್ಯಯನ ನಿರತರಾದವರನ್ನು ಪೂಜೆ ಮಾಡುತ್ತ ಬೆಳಗಿನ ಹೊತ್ತನ್ನು ಕಳೆದನು. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 75**

15. **ಹಕ್ಕಿಯು ಕಣ್ಣುಗಳು ಯಾವುವು?**

**ಉತ್ತರ:** ಹಕ್ಕಿಯು ಕಣ್ಣುಗಳು ಸೂರ್ಯ ಚಂದ್ರರು. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 92**

16. **ಯಜ್ಞಾಶ್ವವನ್ನು ಕಟ್ಟಿದವರು ಯಾರು?**

**ಉತ್ತರ:** ಯಜ್ಞಾಶ್ವವನ್ನು ಕಟ್ಟಿದವರು ಲವ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 138**

17. **ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 176**

**ಉತ್ತರ** : ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರು ಮಕರಾಕ್ಷನ ಕಾಳಗ.

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 × 2 = 20**

**18. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 27**

**ಉತ್ತರ:** ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'(ಸ್ನಾನ). ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ.

**19. ಧ್ವಜವನ್ನೇ ನಮ್ಮ ಗುರುವೆಂದು ಸ್ವೀಕರಿಸಿದ್ದೇವೆ ಎಂದು ಲೇಖಕರು ಹೇಳಲು ಕಾರಣವೇನು?**

**ಉತ್ತರ:** ಕೇವಲ ತತ್ತ್ವ ಒಂದೇ ಆ ಅಚಲವಾದ ಗುರು ಪದವಿಯಲ್ಲಿ ಇರಬಲ್ಲದು. ಅದನ್ನು ಧ್ವಜವು ಸಾಂಕೇತಿಸುವುದು. ಯಾವ ಧ್ವಜವನ್ನು ನೋಡಿದೊಡನೆ ನಮ್ಮ ರಾಷ್ಟ್ರದ ಸಮಸ್ತ ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಗಳು ನಮ್ಮ ಕಣ್ಣಿಗೆ ಕಟ್ಟುತ್ತವೆಯೋ, ಯಾವುದನ್ನು ಕಂಡ ಕೂಡಲೇ ಹೃದಯದ ಭಾವನೆಗಳು ಉಕ್ಕಿ ಬರುತ್ತವೆಯೋ, ಹೃದಯದಲ್ಲಿ ಅಪೂರ್ವ ಸ್ಫೂರ್ತಿಯ ಸಂಚಾರವಾಗುತ್ತದೆಯೋ ಅಂತಹ ಧ್ವಜವನ್ನೇ ನಾವು ನಮ್ಮ ಗುರುವೆಂದು ಸ್ವೀಕರಿಸಿದ್ದೇವೆ ಎಂದು ಲೇಖಕರು ಹೇಳಿದ್ದಾರೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 47**

**20. ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳಾವುವು?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 47**

**ಉತ್ತರ:** ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಕೆಲವು ತೊಡಕುಗಳಿವೆ. ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದೂ, ಸರ್ವಥಾ ಪ್ರಮಾದಾತೀತನೆಂದೂ ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬೇಕು. ಇಲ್ಲವಾದಲ್ಲಿ ಆದರ್ಶವೆಂದು ಭಾವಿಸಲ್ಪಟ್ಟ ವ್ಯಕ್ತಿಯಿಂದ ಏನಾದರೂ ತಪ್ಪಾದರೆ, ಸದ್ಗುಣಗಳನ್ನು ಕಳೆದುಕೊಂಡರೆ, ಪ್ರಮಾದೀತನಾದರೆ ನಾವು ಬೇರೊಬ್ಬನನ್ನು ಹುಡುಕಬೇಕಾಗುತ್ತದೆ. ಆ ಎರಡನೆಯವನಲ್ಲಿ ದೋಷ ಕಂಡುಬಂದರೆ, ಅವನ ಬಗ್ಗೆ ಇರುವ ಶ್ರದ್ಧೆ ಸಹ ಹಾರಿಹೋಗುವುದು ಸ್ವಾಭಾವಿಕ. ಆಗ ಪುನಃ ನಾವು ಮೂರನೆಯ ವ್ಯಕ್ತಿಯನ್ನು ಹುಡುಕುವಂತೆ ಆದೀತು. ಹೀಗಾದರೆ ನಿತ್ಯವೂ ಹೊಸ ಹೊಸ ವ್ಯಕ್ತಿಯನ್ನು ಆದರ್ಶಕ್ಕಾಗಿ ಹುಡುಕುತ್ತ ಹೊರಡಬೇಕಾಗುತ್ತದೆ.

**21. ಮನುಷ್ಯನು ತನ್ನ ಒಳಿತನ್ನು ಹೇಗೆ ಸಾಧಿಸಬಹುದು? ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 64**

**ಉತ್ತರ:** ಮಾನವನು ತನ್ನ ಜೀವನದಲ್ಲಿ ಒಳಿತನ್ನು ಇಬ್ಬಗೆಯಾಗಿ ಸಾಧಿಸಬಹುದೆಂದು ವೇದಗಳು ತಿಳಿಸುತ್ತವೆ. ಅವುಗಳೆಂದರೆ 'ಇಷ್ಟ' ಮತ್ತು 'ಪೂರ್ತ' ಎಂಬ ಎರಡು ಬಗೆಯ ವಿಧಾನಗಳು. 'ಇಷ್ಟ' ಎಂಬುದು ಸಾಮಾನ್ಯವಾದ ಯಜ್ಞವನ್ನು ಸಂಕೇತಿಸುತ್ತದೆ. ಕೆರೆ–ಬಾವಿಗಳನ್ನು ಕಟ್ಟಿಸುವುದು, ಮರ–ಗಿಡಗಳನ್ನು ನೆಡುವುದು, ದೀನ–ದಲಿತರಿಗೆ ಸಹಾಯಮಾಡುವುದು, ಮಂಟಪ–ಧರ್ಮಸತ್ರಗಳ ನಿರ್ಮಾಣ ಮಾಡುವುದು, ಕವಿ–ಕಲಾವಿದರ ಪೋಷಣೆ ಮಾಡುವುದು – ಇವೇ ಮುಂತಾದ ಸಾಮಾನ್ಯವಾದ ಲೋಕೋಪಕಾರಗಳನ್ನು 'ಪೂರ್ತ' ಎಂಬುದು ಸಂಕೇತಿಸುತ್ತದೆ.

**22. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸಿದ್ದಾನೆ?**

**ಉತ್ತರ:** ದುರ್ಯೋಧನನು ಅಜ್ಜ ಭೀಷ್ಮರಿಗೆ "ಅಜ್ಜಾ ಈ ನೆಲಕ್ಕಾಗಿ ಹೋರಾಡುವೆನೆಂದು ಭಾವಿಸಿದಿರಾ? ಇಲ್ಲ. ಛಲಕ್ಕಾಗಿಯೇ ಪಾಂಡುವಿನ ಮಕ್ಕಳಲ್ಲಿ ಹೋರಾಡುತ್ತೇನೆ. ಪ್ರೀತಿಯ ಗೆಳೆಯ ಕರ್ಣ, ಪ್ರೀತಿಯ ತಮ್ಮ ದುಶ್ಯಾಸನ, ಎನ್ನ ನೂರು ಮಕ್ಕಳನ್ನು ಕೊಲ್ಲಿಸಿದ ಈ ನೆಲ ನನಗೆ ಹಾಳು ಬಿದ್ದಿರುವ ನೆಲ. ಸತ್ತವರು ಮತ್ತೆ ಹುಟ್ಟಿಬರುವುದಿಲ್ಲ. ಆದ್ದರಿಂದ ನಾನು ಛಲಕ್ಕಾಗಿ ಹೋರಾಡುತ್ತಿರುವುದು" ಎಂದು ವಿವರಿಸುತ್ತಾನೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 130**

**23. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು? ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 131**

**ಉತ್ತರ:** ತನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದವರು ಅರ್ಜುನ–ಭೀಮರು. ಅವರು ಜೀವಂತವಾಗಿರುವವರೆಗೆ ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಕೊಂದಮೇಲೆ ಪ್ರಸಿದ್ಧನಾದ, ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುತ್ತೇನೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

**24. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?**

**ಉತ್ತರ :** ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಬೇಕು. ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 159**

**25. ಭಗತ್ ಸಿಂಗ್ ತನ್ನ ಸಹಚರರೊಂದಿಗೆ ವೀರಯೋಧನಾಗಿ ಹೇಗೆ ಅಮರನಾದನು?**

**ಉತ್ತರ:** ಭಗತ್‌ಸಿಂಗ್ ಜಲಿಯನ್ ವಾಲಾಬಾಗಿನ ಘಟನೆಯಿಂದ ಆಕ್ರೋಶಿತನಾಗಿ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾಗುತ್ತಾನೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 166**

**26. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ:** ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಚ್ಚಹಸುರಾಗಿ ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 168**

**27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 171**

**ಉತ್ತರ:** ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಬೂದು ಬಣ್ಣದ ಗಿಡದ ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಬೆಳೆಯುತ್ತಿದ್ದ ಜವಾರಿ ಹತ್ತಿ ಗಿಡಗಳ ಹತ್ತಿಯನ್ನು ದೀಪಕ್ಕೆ ಬಳಸುವ ಮೂಲಕ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು.

## V. ಕೆಳಗಿನ ಕವಿ/ಸಾಹಿತಿಗಳ ಸ್ಥಳ,ಕಾಲ ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.

**28. ದೇವನೂರ ಮಹಾದೇವ** **2 × 3 = 6**

ದೇವನೂರ ಮಹಾದೇವ ಅವರು **ಕ್ರಿ.ಶ. 1948** ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರು** ಎಂಬ ಊರಿನಲ್ಲಿ ಜನಿಸಿದರು. ಇವರು **ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ, ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯನೆಂಟ, ನೋಡು ಮತ್ತು ಕೂಡು** ಮುಂತಾದ ಪ್ರಮುಖ ಕೃತಿಗಳನ್ನು ಬರೆದಿದ್ದಾರೆ.

ಇವರ **'ಕುಸುಮಬಾಲೆ'** ಕಾದಂಬರಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಒಡಲಾಳ'** ಕೃತಿಗೆ **'ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ', 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು'** ಲಭಿಸಿವೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 53**

29. **ಜಿ.ಎಸ್.ಶಿವರುದ್ರಪ್ಪ**

ಜಿ.ಎಸ್.ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ **ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ** ನವರು **ಕ್ರಿ.ಶ.1926**ರಲ್ಲಿ **ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ**ದಲ್ಲಿ ಜನಿಸಿದರು. ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪನವರು **ಸಾಮಗಾನ, ಚೆಲುವು-ಒಲವು, ದೇವಶಿಲ್ಪ, ದೀಪದಹೆಜ್ಜೆ, ಅನಾವರಣ. ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

**ಕಾವ್ಯಾರ್ಥಚಿಂತನ** ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ **ನಾಡೋಜ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. **ರಾಷ್ಟ್ರಕವಿ** ಅಭಿಧಾನ ಮತ್ತು **ಪಂಪಪ್ರಶಸ್ತಿ**ಗೆ ಪಾತ್ರರಾಗಿದ್ದಾರೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 81**

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1 × 3 = 3**

30.

4 4 4



ಜ್ಞಾನದೀಪ ಕನ್ನಡ ನೋಟ್ಸ್

| | | |
|---|---|---|
| ∪∪∪∪ | ∪ ∪ – | ∪∪– |
| ಅತಿಕುಟಿ | ಲ ಮನಂ | ಧನಲು |

| | | | | |
|---|---|---|---|---|
| 4 | 4 | 4 | 4 | 4 |
| ∪∪ – | – – | ∪ – ∪ | ∪ ∪ – | ∪ ∪ – |
| ಬ್ಧತೆಯಿಂ | ದಂದು | ಷ್ಟಬುದ್ಧಿ | ನುಡಿದಂ | ಪುಸಿಯಂ |

**ಛಂದಸ್ಸು – ಕಂದ ಪದ್ಯ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 219**

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 × 3 = 3**

**31. "ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"**

**ಅಲಂಕಾರ :** ಉಪಮಾ

**ಲಕ್ಷಣ :** ಎರಡು ವಸ್ತುಗಳ ನಡುವೆ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಲಾಗಿದೆ.

**ಉಪಮೇಯ :** ಗಾಳಿಪಟ

**ಉಪಮಾನ :** ಹಕ್ಕಿಗಳು

**ವಾಚಕ ಪದ :** ಅಂತೆ

**ಸಮಾನ ಧರ್ಮ :** ಹಾರಾಡುವುದು

**ಸಮನ್ವಯ :** ಇಲ್ಲಿ ಉಪಮೇಯ ಗಾಳಿಪಟವನ್ನು ಉಪಮಾನವಾದ ಹಾರಾಡುವ ಹಕ್ಕಿಗಳಿಗೆ ಹೋಲಿಸಲಾಗಿದೆ ಹಾಗಾಗಿ ಇದು ಉಪಮಾ ಅಲಂಕಾರವಾಗಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 210**

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 × 3 = 3**

**32. ಕಟ್ಟುವುದು ಕಠಿಣ; ಕೆಡಹುವುದು ಸುಲಭ.** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 246**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **ಕಟ್ಟುವುದು ಕಠಿಣ; ಕೆಡಹುವುದು ಸುಲಭ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟ ಪಡಬೇಕು. ಆದರೆ ಹಾಳುಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. "**ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ**" ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ.

ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು, ಅರಳನ್ನು ಬೇರ್ಪಡಿಸಿ, ಮಣ್ಣನ್ನು ಹದ ಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ.

ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣ ಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು, ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

**ಅಥವಾ**

**ಮಾಡಿದ್ದುಣ್ಣೋ ಮಹಾರಾಯ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 245**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿ ಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಮಾಡಿದ್ದುಣ್ಣೋ ಮಾರಾಯ** ಎಂಬ ಗಾದೆಯು ಪ್ರಸಿದ್ಧವಾಗಿದೆ. ನಾವು ಎಂತಹ ಕೆಲಸ ಮಾಡುತ್ತೇವೆಯೋ ಅಂತಹ ಫಲ ದೊರೆಯುತ್ತದೆ. ಅಂದರೆ ಪ್ರತಿಯೊಬ್ಬರೂ ಮಾಡುವ ಕರ್ಮಕ್ಕೆ ಅವರ ಕರ್ಮಕ್ಕನುಸಾರವಾಗಿ ಫಲ ದೊರೆಯುತ್ತದೆ. ಭತ್ತ ಬಿತ್ತಿದರೆ, ಭತ್ತ ಬೆಳೆಯುತ್ತದೆ. ಬೇವಿನ ಬೀಜ ಬಿತ್ತಿದರೆ ಬೇವಿನ ಗಿಡ ಬೆಳೆಯುತ್ತದೆ. ಏನಾದರೂ ಕೆಟ್ಟ ಕೆಲಸ ಮಾಡಿ ಅದರಿಂದ ಕೆಟ್ಟ ಫಲವನ್ನು ಅನುಭವಿಸುವಾಗ ಸಂಕಟಪಡುವುದಕ್ಕಿಂತ ಮಾಡುವ ಕೆಲಸವನ್ನು ಒಳ್ಳೆಯದಾಗಿ ಫಲವನ್ನು ಅನುಭವಿಸಬೇಕು ನಾವು ಮಾಡುವ ಒಳ್ಳೆಯ ಕಾರ್ಯಗಳು ನಮ್ಮ ಒಳ್ಳೆಯ ವ್ಯಕ್ತಿತ್ವವನ್ನು ತೋರಿಸುತ್ತವೆ.

ನಾವು ಮಾಡುವ ಕಾರ್ಯ ಸಮಾಜಕ್ಕೆ ಒಳ್ಳೆಯದಾಗಬೇಕು ಆದ್ದರಿಂದ ನಿರ್ಮಲ ಮನಸ್ಸಿನಿಂದ ಒಳ್ಳೆಯ ಕಾರ್ಯಗಳನ್ನು ಮಾಡಿ ನಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ನಾವು ಮಾಡುವ ಕೆಟ್ಟ ಕೆಲಸದಿಂದ ಕೆಟ್ಟ ಪರಿಣಾಮವನ್ನು ಅನುಭವಿಸ ಬೇಕಾಗುತ್ತದೆ. ನಾವು ಮತ್ತೊಬ್ಬರಿಗೆ ಕೆಟ್ಟದ್ದು ಮಾಡಿದರೆ ಬೇರೆ ಯಾವ ರೀತಿಯಿಂದಲಾದರೂ, ನಮಗೆ ಕೆಟ್ಟದ್ದೇ ಆಗುತ್ತದೆ. ಯಾವಾಗಲೂ ಪರದ್ರೋಹ ಕೆಟ್ಟದ್ದೇ. ಆದ್ದರಿಂದ ಸದಾ ಒಳ್ಳೆಯ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು. ಒಳ್ಳೆಯ ಕಾರ್ಯಗಳನ್ನು ಒಳ್ಳೆಯ ಯೋಚನೆಗಳನ್ನು ಮಾಡಿದರೆ ದೇವರು ಸಹ ಮೆಚ್ಚುತ್ತಾನೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 × 3 = 18**

**33. "ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆಯಾರು?"**

**ಆಯ್ಕೆ:–** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಲಕ್ಷ್ಮಣನು ತನ್ನ ಅಣ್ಣನಾದ ಶ್ರೀರಾಮನಿಗೆ **"**ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?**"** ಎಂದು ಸಂತೈಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:–** ತಾಳಿದವನು ಬಾಳಿಯಾನು ಎಂಬ ಗಾದೆಮಾತಿನಂತೆ ತನ್ನ ಅಣ್ಣನಿಗೆ ಸಾಂತ್ವನ ಹೇಳುತ್ತಿರುವುದು, ಸಹೋದರರ ಸಹಬಾಳ್ವೆಯ ಗುಣ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 6**

34. **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ "**

**ಆಯ್ಕೆ:-** ಈ ವಾಕ್ಯವನ್ನು **'ವಿ.ಕೃ.ಗೋಕಾಕ್'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:-** ಲೇಖಕರು ಲಂಡನ್ ನಗರದ ಬೀದಿಬೀದಿಯಲ್ಲಿ, ಮೂಲೆಮೂಲೆಯಲ್ಲಿ ನಿಲ್ಲಿಸಿದ ಇತಿಹಾಸ ಪ್ರಸಿದ್ಧ ಪುರುಷರ ಶಿಲಾಪ್ರತಿಮೆಗಳನ್ನು ನೋಡಿದಾಗ ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದು ಕೈಯೆತ್ತಿ ನಿಂತ ಆ ಪ್ರತಿಮೆಗಳು "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:-** ಇಂಗ್ಲೆಂಡ್ ರಾಷ್ಟ್ರಕ್ಕಾಗಿ ದುಡಿದ ನಾಯಕರು ತಮ್ಮ ದೊಡ್ಡ ದೇಶದ ಗೌರವವನ್ನು ಹೆಮ್ಮೆ ಯಿಂದ ಕಾಪಾಡಲು ಹೇಳಿದಂತಿರುವುದನ್ನು ಲೇಖಕರು ಸ್ವಾರಸ್ಯಪೂರ್ಣ ಅಭಿವ್ಯಕ್ತಪಡಿಸಿದ್ದಾರೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 19**

35. **"ಪೊನ್ನನೆಲ್ಲಮಂ ನೀನೆ ಕೊಂಡೆ"**

**ಆಯ್ಕೆ:** ಈ ವಾಕ್ಯವನ್ನು **'ದುರ್ಗಸಿಂಹ ಕವಿ'** ವಿರಚಿತ **'ಪಂಚತಂತ್ರ'** ಎಂಬ ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳಿದನು. ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೋಗಿ ಹೂತಿಟ್ಟ ಹೊನ್ನನೆಲ್ಲವನ್ನು ತೆಗೆದುಕೊಂಡು ಕುಳಿಯನ್ನು ಮೊದಲಿನಂತೆ ಮುಚ್ಚಿ, ಕೆಲವಾನು ದಿವಸಗಳನ್ನು ಬಿಟ್ಟು, ತಾನೇ ಧರ್ಮಬುದ್ಧಿಯಲ್ಲಿಗೆ ಬಂದು, ವ್ಯಯಕ್ಕೆ ಹೊನ್ನಿಲ್ಲ. ಇನ್ನು ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬನ್ನಿರಿ ಎಂದು ಜೊತೆಗೂಡಿ ಕರೆದುಕೊಂಡು ಹೊನ್ನು ಹೂತಿಟ್ಟ ಸ್ಥಳಕ್ಕೆ ಹೋದನು. ಹೂತುಹಾಕಿದ ಸ್ಥಳದಲ್ಲಿ ಹೊನ್ನನ್ನು ಕಾಣದೆ, ಇನ್ನು ಮಾತನಾಡದೆ ಇದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, **"ಪೊನ್ನನೆಲ್ಲಮಂ ನೀನೆ ಕೊಂಡೆ** (ಹೊನ್ನನೆಲ್ಲವನ್ನು ನೀನೆ ತೆಗೆದುಕೊಂಡು ಹೋಗಿದ್ದೀಯಾ) ಎಂದು ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನು ಕದ್ದ ಆರೋಪವನ್ನು ಹೊರಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ :** ತನ್ನ ಮೇಲೆ ಅಪವಾದ ಬರದಂತೆ ನೋಡಿಕೊಳ್ಳುವ ಮತ್ತು ಇನ್ನೊಬ್ಬರ ಮೇಲೆ ಅಪವಾದವನ್ನು ಹೊರಿಸುವ ದುಷ್ಟಬುದ್ಧಿಯ ತಂತ್ರವನ್ನು ಕವಿ ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಎತ್ತಿ ತೋರಿಸಿದ್ದಾನೆ.

**ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 77**

36. **"ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ:-** ಈ ವಾಕ್ಯವನ್ನು **ದ.ರಾ.ಬೇಂದ್ರೆ** ವಿರಚಿತ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:-** ಕಾಲದ ವೈಜ್ಞಾನಿಕ ಗತಿಯನ್ನು ಹೇಳುವ ಸಂದರ್ಭದಲ್ಲಿ ದ.ರಾ.ಬೇಂದ್ರೆ ಅವರು ಈ ವಾಕ್ಯವನ್ನು ಹೇಳುತ್ತಾರೆ. ಕಾಲಪಕ್ಷಿಯು ಬೆಳ್ಳಿಚುಕ್ಕಿ (ಶುಕ್ರಗ್ರಹ) ಎಂಬ ಹಳ್ಳಿಯ ಮೇರೆಯನ್ನು ದಾಟಿ, ಚಂದ್ರಲೋಕಕ್ಕೆ ಹಾರಿ ನೀರಿನ್ನು ಹೀರಿ ಹಾಗೆಯೇ ಮುಂದೆ ಹಾರಾಡುತ್ತ ಹಾರಾಡುತ್ತ ಮಂಗಳ ಲೋಕ(ಗ್ರಹ)ದ ಅಂಗಳಕ್ಕೆ ಏರಿ ಹೋಗುತ್ತಿದೆ ಎಂದು ವಿವರಿಸುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ :-** ವೈಜ್ಞಾನಿಕವಾಗಿ ಭಾರತೀಯರು ಶುಕ್ರ, ಚಂದ್ರ, ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 95**

37. **ಬೆನ್ನಬೆನ್ನತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ದಂಗ**

**ಆಯ್ಕೆ :-** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:-** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್‌ರ ದಂಡು ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು **ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು.** ಬೇಡರನ್ನು

ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರ ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಹಲಗಲಿಯ ಬೇಡರ ಮೇಲೆ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷ್ ಸೈನಿಕರ ನಿಷ್ಕರುಣೆಯ ಭಾವ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿತವಾಗಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 103**

**38. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶ** ವಿರಚಿತ **' ಜೈಮಿನಿ ಭಾರತ '** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಲವನು ಆಶ್ರಮಕ್ಕೆ ಬಂದ ಯಜ್ಞ ಕುದುರೆಯ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿ, ಶ್ರೀರಾಮನೊಬ್ಬನೇ ವೀರನೇನು? ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಲವನು ತನ್ನ ತಾಯಿ ವೀರಜನನಿ ಎಂಬ ಮಾತೃಪ್ರೇಮವನ್ನು ಮತ್ತು ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 141**

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 × 4 = 4**

39.

| | | |
|---|---|---|
| ಹಸುರಾಗಸ; **ಹಸುರು ಮುಗಿಲು**<br>**ಹಸುರು ಗದ್ದೆಯಾ ಬಯಲು**<br>**ಹಸುರಿನ ಮಲೆ; ಹಸುರು ಕಣಿವೆ**<br>**ಹಸುರು ಸಂಜೆಯೀ** ಬಿಸಿಲೂ! | **ಅಥವಾ** | ಹೊಸ **ಹೂವಿನ ಕಂಪು ಹಸುರು**<br>**ಎಲರಿನ ತಂಪೂ ಹಸುರು!**<br>**ಹಕ್ಕಿಯಕೊರಲಿಂಪು ಹಸುರು!**<br>**ಹಸುರು** ಹಸುರಿಳೆಯುಸಿರೂ! |

**ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 126**

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.**

**1 × 4 = 4**

40. **ಮರುಳು ಮಾಧವ ಮಹಿಯ ರಾಜ್ಯದ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 113**

**ಸಿರಿಗೆ ಸೋಲುವನಲ್ಲ ಕೌಂತೇ**

**ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ**

**ಹೊರೆದ ದಾತಾರಂಗೆ ಹಗೆವರ**

**ಶಿರವನರಿದೊಪ್ಪಿಸುವೆನೆಂಬೀ**

**ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ**

ಈ ಚರಣವನ್ನು **'ಕುಮಾರವ್ಯಾಸ'** ಎಂದು ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾ ಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ" ಎಂದನು.

ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣನಿಗೆ ವಿಧಿಯು ಎಂತಹ ಸಂಕಟ ವನ್ನು ಉಂಟು ಮಾಡಿತು ಹಾಗೂ ಅವನ ಸ್ವಾಮಿನಿಷ್ಠೆಯ ಮುಂದೆ ಶ್ರೀಕೃಷ್ಣನ ಪ್ರಲೋಭನೆ ಹೇಗೆ ವ್ಯರ್ಥಗೊಂಡಿತು

ಎಂಬುದು ಈ ಪದ್ಯದ ಆಶಯವಾಗಿದೆ. **'ನಿರ್ದಿಷ್ಟ ಗುರಿಸಾಧನೆಗೆ ವಿವಿಧ ಭಾವನಾತ್ಮಕ ತಡೆಗೋಡೆಗಳು ಉದಿಸಿ ದರೂ ಅದನ್ನು ಮೀರಿ ಸಾಗುವ ಛಲವನ್ನು ಹೊಂದಿರಬೇಕು'** ಎಂಬ ಮೌಲ್ಯಯುತ ಸಂದೇಶವು ಈ ಪದ್ಯಭಾಗದಲ್ಲಿ ವ್ಯಕ್ತವಾಗಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 × 4 = 8**

**41. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿದ್ದ ಕಾರ್ಯ ನಿರ್ವಹಿಸುತ್ತಿದ್ದ 'ಪ್ರಜಾಪ್ರತಿನಿಧಿ ಸಭೆ' ಹಾಗೂ ನ್ಯಾಯ ವಿಧಾಯಕ ಸಭೆ ಕುರಿತು ಬರೆಯಿರಿ.** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 39**

**ಉತ್ತರ:**

**'ಪ್ರಜಾಪ್ರತಿನಿಧಿ ಸಭೆ'**

ನಾಲ್ವಡಿ ಕೃಷ್ಣರಾಜ ಒಡೆಯರು 1923ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಪ್ರಜಾಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ ಅಂದರೆ

1. ಜೂನ್– ಮಹಾರಾಜರ ವರ್ಧಂತಿ,

2. ಅಕ್ಟೋಬರ್ – ದಸರಾ ಮಹೋತ್ಸವದಂದು ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಳು ನಡೆಯುತ್ತಿದ್ದವು.

**ನ್ಯಾಯ ವಿಧಾಯಕ ಸಭೆ**

ನಾಲ್ವಡಿ ಕೃಷ್ಣರಾಜ ಒಡೆಯರು 1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸ್ಥಾಪಿಸಿದರು. ಇದು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

**ಅಥವಾ.**

**ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 40**

**ಉತ್ತರ:** ವಿಶ್ವೇಶ್ವರಯ್ಯ ಅವರು **ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ,** ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತು **"ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"** ಎಂದು ಹೇಳಿದ್ದಾರೆ. ಅದಕ್ಕಾಗಿ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. **1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.** ಪ್ರೌಢಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇದನ್ನು ಬದಲಿಸಿ ಮೈಸೂರು ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಕಾಲದಲ್ಲಾಯಿತು. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಕಾಲೇಜು, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಆಸಕ್ತಿಯನ್ನು ಮನಗಂಡು **'ಕನ್ನಡ ಸಾಹಿತ್ಯ ಪರಿಷತ್ತನ್ನು'** ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ.

42. ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನನ್ನೂ ಜೊತೆಯಲ್ಲಿ ಕರೆದುಕೊಂಡು ದೇಶದೇಶಗಳನ್ನೆಲ್ಲ ಅಲೆದಾಡಿ ಪರಶುರಾಮನ ಬಳಿಗೆ ಬಂದನು, ಆಗ ನಾರುಮಡಿಯಿಂದ ಸುತ್ತುವರಿದ ನಡುವುಳ್ಳವನಾಗಿದ್ದ, ಜಟಾ ಸಮೂಹದಿಂದ ಕೂಡಿದವನೂ ಆಗಿದ್ದ, ತಪೋವನಕ್ಕೆ ಹೊರಟಾಗ ಪರಶುರಾಮನು, ದ್ರವ್ಯಾರ್ಥಿಯಾಗಿ ಬಂದ



ಜ್ಞಾನದೀಪ ಕನ್ನಡ ನೋಟ್ಸ್

ದ್ರೋಣನಿಗೆ ಪರಶುರಾಮರು ದ್ರೋಣನನ್ನು ಕಂಡು ಪರುಶುರಾಮನು ಒಡವೆಗಳನ್ನೆಲ್ಲ ಬೇಡಿದವರಿಗೆ ಕೊಟ್ಟಿದ್ದನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟಿದ್ದನು. ಅವನಲ್ಲಿ ಒಂದಡಕೆಯೂ ಇರಲಿಲ್ಲ. ಕನಕಪಾತ್ರೆ ಇಲ್ಲದಿರುವುದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

**ದ್ರೋಣನಿಗೆ ವಿದ್ಯೆಯೇ ಧನವಾಗಿತ್ತು**. ವಾರುಣ, ವಾಯವ್ಯ, ಆಗ್ನೇಯ, ಐಂದ್ರಿಯಾ ಮೊದಲಾದ ಪ್ರಧಾನವಾದ ದಿವ್ಯಾಸ್ತ್ರಗಳನ್ನು ಕೊಟ್ಟು ಸತ್ಕರಿಸಿದರು. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 149**

**ಅಥವಾ**

**ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 150**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು"ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎಂದು ಹೇಳಲು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು.

ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು **"ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?"** ಎಂದಾಗ ದ್ರುಪದನು **"ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲವರಾಗುತ್ತಾರೆಯೇ?"** ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು "ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತುಗಳು ತೊದಲುವುದು; ಮುಖದಲ್ಲಿ. ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು; ಭಾಂಧವ್ಯವನ್ನು ಮರೆಯುವಂತೆ ಮಾಡುವುದು; ಆದುದರಿಂದ ಸಂದೇಹ ಪಡದೆ ಸ್ಪಷ್ಟವಾಗಿ ಐಶ್ವರ್ಯವು (ಲಕ್ಷ್ಮಿಯು) ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ತಿಳಿದೆನು" ಎಂದು ಹೇಳಿದನು. ಮುಂದವರೆದು ದ್ರೋಣನು ದ್ರುಪದನನ್ನು ಕುರಿತು "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠ ವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದಿವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?" ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 × 4 = 4 (2 + 2)**

**43(ಅ) ತಿಪ್ಪೇನಹಳ್ಳಿ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು?**

**ಉತ್ತರ:** ತಿಪ್ಪೇನಹಳ್ಳಿ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ

1. ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು.
2. ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು.
3. ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ.
4. ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಕುಳಿತು ಗಲಾಟೆ ಮಾಡಕೂಡದು ಎಂದು ಬರೆಯಲಾಗಿತ್ತು.

**43(ಬ) ರಂಗಣ್ಣ ತಿಪ್ಪೇನಹಳ್ಳಿಯ ಶಾಲೆಗೆ ಭೇಟಿ ನೀಡಲು ಕಾರಣವೇನು?**

**ಉತ್ತರ :** ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ? ಇನ್ನೂ ಇತರರೂ ಯಾರೂ ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ಸುಮಾರು 9 ಗಂಟೆಗೆ ರಂಗಣ್ಣ ತಿಪ್ಪೇನಹಳ್ಳಿಯ ಶಾಲೆಗೆ ಭೇಟಿ ನೀಡಲು ಬಂದ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 × 5 = 5**

44. ನಿಮ್ಮನ್ನು ಹಾಸನದ ವಿಜಯನಗರ ನಿವಾಸಿ 'ವಸಂತಕುಮಾರ್' ಎಂದು ಭಾವಿಸಿಕೊಂಡು ನಿಮ್ಮ ಪ್ರದೇಶದಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ವಿವರಿಸಿ, ಪರಿಹಾರ ಕಾರ್ಯ ಕೈಗೊಳ್ಳುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

**ಇವರಿಂದ,**
**ವಸಂತಕುಮಾರ್**
ವಿಜಯನಗರ,
ಹಾಸನ

**31 ಮಾರ್ಚ 2023**
ಹಾಸನ

**ಇವರಿಗೆ,**
ಮಾನ್ಯ ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ

ಮಾನ್ಯರೇ,

**ವಿಷಯ:** ನಮ್ಮ ಪ್ರದೇಶದಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಗೆ **ಪರಿಹಾರ ಕಾರ್ಯ** ಕೈಗೊಳ್ಳುವಂತೆ ಕೋರಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೇನೆಂದರೆ ನಾವು ವಾಸಿಸುವ ನಮ್ಮ ಪ್ರದೇಶವಾದ ವಿಜಯನಗರ ಬಡಾವಣೆಯಲ್ಲಿ ಕಳೆದ 3 ದಿನಗಳಿಂದ ಸುರಿದ ವಿಪರೀತ ಮಳೆಗೆ ಅಪಾರ ಆಸ್ತಿ ನಷ್ಟವಾಗಿದ್ದು, ಆದ್ದರಿಂದ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಜೊತೆಗೆ ಸರ್ಕಾರದಿಂದ ಸಿಗುವ ಸಕಲ ಸೌಲಭ್ಯಗಳನ್ನು ಆದಷ್ಟು ಬೇಗನೆ ನೀವು ಒದಗಿಸಿ ಕೊಡಬೇಕೆಂದು ತಮ್ಮಲ್ಲಿ ಈ ಮೂಲಕ ವಿನಂತಿಸುತ್ತೇನೆ.

ಧನ್ಯವಾದಗಳೊಂದಿಗೆ

**ತಮ್ಮ ವಿಶ್ವಾಸಿ**

ವಸಂತಕುಮಾರ್

**ಹೊರವಿಳಾಸ**

| **ಇವರಿಂದ,** | **ಇವರಿಗೆ,** |
|---|---|
| ವಸಂತಕುಮಾರ್<br>ವಿಜಯನಗರ,<br>ಹಾಸನ | ಮಾನ್ಯ ಜಿಲ್ಲಾಧಿಕಾರಿಗಳು<br>ಹಾಸನ ಜಿಲ್ಲೆ |

**ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 281**

ಜ್ಞಾನದೀಪ ಟಾರ್ಗೆಟ್ 100 ಕನ್ನಡ ನೋಟ್ಸ್

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**45. ರಾಷ್ಟ್ರೀಯ ಭಾವೈಕ್ಯತೆ**

**1 × 5 = 5**

**ಪೀಠಿಕೆ:**

ಜನರು ವಾಸಮಾಡುತ್ತಿರುವ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶವನ್ನು ದೇಶ ಎಂದು ಕರೆಯಬಹುದು. ಎಲ್ಲ ಜನರು ತಾವೆಲ್ಲ ಒಂದೇ ಎಂಬ ಭಾವನೆಗಳನ್ನು ಹೊಂದುವುದು ಐಕ್ಯತೆ. ಅದೇ ರೀತಿ ದೇಶದಲ್ಲಿ ವಾಸಿಸುತ್ತಿರುವ ಜನರೆಲ್ಲರು ತಮ್ಮ ಧರ್ಮ, ಜಾತಿ, ಕುಲ, ಭಾಷೆಗಳನ್ನು ಬದಿಗೊತ್ತಿ ಒಂದೇ ಕುಟುಂಬದ ಸದಸ್ಯರಂತೆ ವಾಸಮಾಡುವುದನ್ನು ರಾಷ್ಟ್ರೀಯ ಭಾವೈಕ್ಯತೆ ಎಂದು ಕರೆಯಬಹುದು. ಭಾರತದಂತಹ ವೈವಿಧ್ಯತೆಗಳಿಂದ ಕೂಡಿರುವ ರಾಷ್ಟ್ರದಲ್ಲಿ ಏಕತೆಯನ್ನು ಸಾಧಿಸುವುದು ಬಹಳ ಮುಖ್ಯವೆನಿಸುತ್ತದೆ.

**ವಿಷಯ ನಿರೂಪಣೆ:**

**"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ"** ಎಂಬ ಮಾತಿನಂತೆ **"ಹೆತ್ತತಾಯಿ ಹೊತ್ತಭೂಮಿಯು ಸ್ವರ್ಗವಿದ್ದಂತೆ"**. ಇಂತಹ ಹೊತ್ತ ಭೂಮಿಯಲ್ಲಿ ವಾಸಿಸುವ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ರಾಷ್ಟ್ರದ ಐಕ್ಯತೆಗೆ ರಾಷ್ಟ್ರೀಯ ಭಾವನೆಯೂ ಅಗತ್ಯವಾದದು. ಭಾರತ ಸರ್ವಧರ್ಮಗಳ ನೆಲೆಬೀಡು. ಇಲ್ಲಿ ವಿವಿಧ ಜಾತಿ, ಮತ, ಪಂಥ, ಭಾಷೆ, ಸಂಸ್ಕೃತಿಯ ಜನರು ಇದ್ದಾರೆ. ಇಂತಹ ವೈವಿಧ್ಯತೆಯಿಂದ ಕೂಡಿರುವ ಜನರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು, ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ, ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಸಂಕೀರ್ಣತೆಯನ್ನು ತೊರೆದು ಆಚರಿಸುವ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿಗಳನ್ನು ಸಾಮೂಹಿಕವಾಗಿ ಆಚರಿಸಿದಾಗ ಐಕ್ಯತೆಯನ್ನು ಸಾಧಿಸಬಹುದು. ರಾಷ್ಟ್ರಗೀತೆ, ರಾಷ್ಟ್ರಧ್ವಜಕ್ಕೆ ಗೌರವವನ್ನು ನೀಡುವುದು, ರಾಷ್ಟ್ರನಾಯಕರ ಉತ್ತಮ ಆದರ್ಶಗಳನ್ನು ಬೆಳೆಸಿಕೊಳ್ಳುವುದು, ರಾಷ್ಟ್ರಕ್ಕೆ ಧಕ್ಕೆಯುಂಟಾದಾಗ ದೇಶದ ಎಲ್ಲ ಪ್ರಜೆಗಳು ಪರಸ್ಪರ ಸಹಾಯ ಸಹಕಾರದಿಂದ ನಡೆದುಕೊಂಡರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರಬಹುದಾಗಿದೆ. ಅಲ್ಲದೆ ರಾಷ್ಟ್ರಮಟ್ಟದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ರಾಷ್ಟ್ರೀಯ ಭಾವೈಕ್ಯತೆಯನ್ನು ತರಬಲ್ಲವು.

**ಉಪಸಂಹಾರ** : ಎಲ್ಲರೂ ಎಲ್ಲರಿಗಾಗಿ ಎಂಬ ಮಂತ್ರದಿಂದ, ಕಣ್ಣು ಬೇರೆಯಾದರೂ ನೋಟ ಒಂದೇ, ಭಾಷೆ ಬೇರೆಯಾದರೂ ಭಾವ ಒಂದೇ ಜಾತಿ, ಕುಲ, ಮತ, ಧರ್ಮ ಬೇರೆ ಬೇರೆಯಾದರೂ ಬಾಳುವ ದೇಶ ಒಂದೆಯಾಗಿದೆ ಎಂದ ಮೇಲೆ ನಾವೆಲ್ಲಾ ಒಂದೆ ತೊಟ್ಟಿಲಲ್ಲಿ ಬೆಳೆವ ಜನರು ನಾವು ಭಾರತೀಯರು ಐಕ್ಯತೆಯ ಮಂತ್ರ ಪಠಿಸುವವರಾಗಬೇಕೆಂಬುದು ನಮ್ಮ ನಿಮ್ಮೆಲ್ಲರ ಆಶಯವಾಗಬೇಕಿದೆ. **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 262–263**

**ಅಥವಾ**

**ಸಾಮಾಜಿಕ ಜಾಲತಾಣಗಳ ಮಹತ್ವ** **ಜ್ಞಾನದೀಪ ನೋಟ್ಸ್ ಪುಟ ಸಂಖ್ಯೆ 276–277**

**ಪೀಠಿಕೆ:**

ಆಧುನಿಕ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಅತಿಯಾಗಿದೆ. ಅದರ ಬಳಕೆಯಿಂದ ಉಪಯೋಗ ಮತ್ತು ದುರುಪಯೋಗಗಳು ಕೂಡ ಇವೆ. ಹಾನಿಗಳಿದ್ದರೂ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಇವುಗಳ ಮಹತ್ವ ಅಡಗಿದೆ.

**ವಿಷಯ ನಿರೂಪಣೆ :**

ವಾಟ್ಸಪ್, ಟ್ವಿಟರ್, ಫೇಸ್ ಬುಕ್, ಹೈಕ್, ಟೆಲಿಗ್ರಾಮ್, ಯೂಟೂಬ್, ಇಮೇಲ್, ಬ್ಲಾಗರ್, ವೆಬ್ ಸೈಟ್ ಗಳಂತಹ ಸಾಮಾಜಿಕ ಸಂಪರ್ಕದ ಜಾಲತಾಣಗಳು ಬಳಕೆಯಾಗುತ್ತಿವೆ. ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಕಲಿಸುತ್ತವೆ. ಹಲವಾರು ವಿಷಯಗಳ ಅನುಭವವಾಗುತ್ತದೆ. ಮಾಹಿತಿಗಳನ್ನು ಹಂಚಿಕೊಳ್ಳಲು ಮತ್ತು ಪಡೆದುಕೊಳ್ಳಲು ಸಹಾಯಕವಾಗಿವೆ. ಗೂಗಲ್‌ನಂತಹ ವೆಬ್‌ಸೈಟ್ ಗಳಲ್ಲಿ ಸಾಕಷ್ಟು ಜ್ಞಾನಪೂರಕ ಮಾಹಿತಿಗಳು ಇವೆ. ಅವುಗಳನ್ನು ವಿದ್ಯಾರ್ಥಿಗಳ ಬಳಸಿಕೊಂಡು ಜ್ಞಾನ ವಿಕಾಸ ಮಾಡಿಕೊಳ್ಳಬಹುದು. ಕಲೆ, ಸಾಹಿತ್ಯ, ಸಂಗೀತ, ಇತಿಹಾಸ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳು ಲಭ್ಯವಿರುತ್ತವೆ.

ಇಂದಿನ ಕಾಲದಲ್ಲಿ ವಿದ್ಯಾರ್ಥಿಗಳ ಬೆರಳ ತುದಿಯಲ್ಲಿ ಇಡಿ ಜಗತ್ತೆ ಹುದುಗಿರುತ್ತದೆ. ಸುಮಾರು ಪ್ರತಿಶತ 50 ರಷ್ಟು ವಿದ್ಯಾರ್ಥಿಗಳು ಪ್ರಾಯೋಜಿತ ಕಾರ್ಯಗಳಿಗೆ ಮತ್ತು ಅಧ್ಯಯನಕ್ಕಾಗಿ ಜಾಲತಾಣಗಳನ್ನು ಜಾಲಾಡುತ್ತಾರೆ. ವಿದ್ಯಾರ್ಥಿಗಳು ಪ್ರಚಲಿತ ವಿದ್ಯಮಾನಗಳನ್ನು ಅರಿಯುವಲ್ಲಿ ಮತ್ತು ಹೊಸ ಮಾಹಿತಿಯನ್ನು ಪಡೆಯುವಲ್ಲಿ ಜಾಲತಾಣಗಳಿಂದ ತುಂಬಾ ಅನುಕೂಲವಿದೆ. ಅಗತ್ಯವೆನಿಸಿದ ಚಿತ್ರಗಳು, ವೀಡೀಯೋಗಳು, ಸಾಹಿತ್ಯಗಳನ್ನು ಬಳಸಿಕೊಂಡು ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುವುದು ಮಹತ್ವವಾದ ವಿಷಯವಾಗಿದೆ. ಹೈಕ್ ನಂತಹ ಸಾಮಾಜಿಕ ಜಾಲತಾಣವೊಂದು ಸಿರಿ ಕನ್ನಡ ನುಡಿ ಬಳಗ ಎಂಬ ಹೆಸರಿನಲ್ಲಿ ಗುಂಪು ರಚಿಸಿಕೊಂಡು ಕರ್ನಾಟಕದ ಸಾವಿರಾರು ಶಿಕ್ಷಕರನ್ನು ಒಗ್ಗೂಡಿಸಿ ಆ ಮೂಲಕ ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಕಾರಣವಾಗಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಜ್ಞಾನಪೂರಕ ಆ್ಯಪ್‌ಗಳು ಕೂಡಿ ಹುಟ್ಟಿಕೊಂಡಿವೆ. ಆದ್ದರಿಂದ ಸಾಮಾಜಿಕ ಜಾಲತಾಣಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

**ಉಪಸಂಹಾರ :** ಸಾಮಾಜಿಕ ಜಾಲತಾಣಗಳು ಸಾಕಷ್ಟು ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾರಕವಾಗಿದ್ದರೂ ಅವುಗಳಲ್ಲಿನ ಜ್ಞಾನ ವಿಷಯಕ ಅಂಶಗಳನ್ನು ಪಡೆದುಕೊಂಡರೆ ಜ್ಞಾನವಿಕಾಸವಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

---

**ಕನ್ನಡದ ಉಪಯುಕ್ತ ನೋಟ್ಸ್‌ಗಳಿಗಾಗಿ ಸಂಪರ್ಕಿಸಿ**

**ಈರಪ್ಪ ಮಹಾಲಿಂಗಪೂರ – 9686185155**

**ಬಸವರಾಜ ಟಿ.ಎಂ – 9743887044**

**ಮಹೇಶ್ ಎಸ್ – 9743316629**

**ರಾಘವೇಂದ್ರ – 9945586244**

ಜ್ಞಾನದೀಪ ಕನ್ನಡ 100 ನೋಟ್ಸ್

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE - 560 003**

## ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆ – 2021

**S.S.L.C MAIN EXAMINATION – 2021**

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**(CCERF/CCERR/CCEPF/CCEPR/NSR/NSPR)**

**Key Answers**

**ಉತ್ತರಗಳ ಸಂಕೇತ**

**ಸಂಕೇತ ಸಂಖ್ಯೆ : 01K** **Code No. : 01K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** **[Total No. of Questions : 40+40+40=120**

## ಪ್ರಥಮ ಭಾಷೆ ಕನ್ನಡ

---

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ. **[40×1=40]**

**1)** ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ಈ ಹೇಳಿಕೆಯ ಮುಂದುವರಿದ ಭಾಗ

A) ಅಮ್ಮಾ, ನಾನೋರ್ವ ಡಾಕ್ಟರ್

B) ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು

C) ಅಮ್ಮಾ ಬಾಗಿಲು ತೆಗೆಯಿರಿ

D) ನನ್ನ ಹುಡುಗಿಗೊಮ್ಮೆ ಹೆರಿಗೆಯಾದರೆ ಸಾಕಾಗಿತ್ತು

**ಉತ್ತರ** : (B) ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು

**2) ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ನಡೆದ ಸ್ಥಳ**

A) ಚಿಕ್ಕಬಳ್ಳಾಪುರ
B) ಮುದ್ದೇನಹಳ್ಳಿ
C) ಮೋಕ್ಷಗೊಂಡಂ
D) ಬೆಂಗಳೂರು

**ಉತ್ತರ** : (A) ಚಿಕ್ಕಬಳ್ಳಾಪುರ

**3) ಮನೆಮಂಚಮ್ಮ ಕಥೆ ಹೇಳಿದ ಕವಿ**

A) ಫ. ಗು. ಹಳಕಟ್ಟಿ
B) ದೇವನೂರ ಮಹಾದೇವ
C) ಡಾ॥ ಅಶೋಕ ಪೈ
D) ಸಿದ್ಧಲಿಂಗಯ್ಯ

**ಉತ್ತರ** : (D) ಸಿದ್ಧಲಿಂಗಯ್ಯ

**4) ಹುಲಿಗೆ ಪರಮಾನಂದವಾದುದು ಈ ಕಾರಣದಿಂದ**

A) ಖಿರ್ದಿಪುಸ್ತಕ ನೋಡಿ
B) ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ
C) ಶಾನುಭೋಗರು ಬೆನ್ನು ತಿರುಗಿಸಿ ನಡೆಯುತ್ತಿರುವುದನ್ನು ನೋಡಿ
D) ಎತ್ತುಗಳ ಘಂಟೆಯ ಶಬ್ದವನ್ನು ಕೇಳಿ

**ಉತ್ತರ** : (B) ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ

**5) ಯುದ್ಧ ಪಾಠದ ಆಶಯ**

A) ಸಂಕಷ್ಟದಲ್ಲಿದರೂ ವೈರಿ–ಮಿತ್ರ ಎಂದು ನೋಡದೆ ಸಹಾಯ ಮಾಡದೆ ಇರುವುದು
B) ಸಂಕಷ್ಟದಲ್ಲಿ ವೈರಿ–ಮಿತ್ರ ಎಂದು ನೋಡದೆ ಪರಸ್ಪರ ಸಹಕಾರದೊಂದಿಗೆ ಮಾನವೀಯ ಮೌಲ್ಯ ಎತ್ತಿ ಹಿಡಿಯುವುದು
C) ಜೀವನದಲ್ಲಿ ಧನಾತ್ಮಕ ಭಾವನೆಯ ದೃಢ ಸಂಕಲ್ಪ ಹೊಂದಿರಬೇಕೆಂದು ಹೇಳಿರುವುದು
D) ವ್ಯಕ್ತಿಯು ಸಮಾಜಮುಖಿಯಾಗಿ ಲಭಿಸಿದ ಅಧಿಕಾರವನ್ನು ಬಳಕೆ ಮಾಡಿಕೊಳ್ಳಬೇಕೆಂದು ಹೇಳಿರುವುದು

**ಉತ್ತರ** : (B) ಸಂಕಷ್ಟದಲ್ಲಿ ವೈರಿ–ಮಿತ್ರ ಎಂದು ನೋಡದೆ ಪರಸ್ಪರ ಸಹಕಾರದೊಂದಿಗೆ ಮಾನವೀಯ ಮೌಲ್ಯ ಎತ್ತಿ ಹಿಡಿಯುವುದು

**6) ಸೂರ್ಯನೇ ತೇಜಗೆಡೆ ತೇಜಕೆಡೆಯಾರು? ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆಯಾರು? ಎಂದು ರಾಮನನ್ನು ಸಂತೈಸಿದವರು**

A) ಲಕ್ಷ್ಮಣ  B) ಶಬರಿ

C) ದನು  D) ಮತಂಗ

**ಉತ್ತರ** : (A) ಲಕ್ಷ್ಮಣ

**7) ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾದ ವರ್ಷ**

A) 1895  B) 1902

C) 1897  D) 1898

**ಉತ್ತರ** : (A) 1895

**8) ಮನೆಮಂಚಮ್ಮ ಇಂದು ಪೂಜಿತಳಾಗುತ್ತಿರುವ ಸ್ಥಳ**

A) ದೇವಸ್ಥಾನ  B) ಚಾವಣಿಯಿಲ್ಲದ ಗುಡಿ

C) ಜನರ ಮನಸ್ಸಿನಲ್ಲಿ  D) ಗ್ರಾಮಸ್ಥರ ಮನೆಗಳಲ್ಲಿ

**ಉತ್ತರ** : (B) ಚಾವಣಿಯಿಲ್ಲದ ಗುಡಿ

**9) ಶಾನುಭೋಗರು ಈ ಕಾರಣಕ್ಕಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು**

A) ಇರಸಾಲಿಗಾಗಿ  B) ವ್ಯಾಪಾರಕ್ಕಾಗಿ

C) ನ್ಯಾಯ ತೀರ್ಮಾನಕ್ಕಾಗಿ  D) ವಿಹಾರಕ್ಕಾಗಿ

**ಉತ್ತರ** : (A) ಇರಸಾಲಿಗಾಗಿ

**10) 'ಕರ್ನಾಟಕ ಪಂಚತಂತ್ರ' ಎಂಬ ಚಂಪೂಕಾವ್ಯದ ಕರ್ತೃ**

A) ಗುಣಾಢ್ಯ  B) ದುರ್ಗಸಿಂಹ

C) ಪಂಪ  D) ರನ್ನ

**ಉತ್ತರ** : (B) ದುರ್ಗಸಿಂಹ

**11) ದುಷ್ಟಬುದ್ಧಿಯ ತಂದೆ**

A) ಧರ್ಮಬುದ್ಧಿ B) ಪ್ರೇಮಮತಿ

C) ಸತ್ಯಮತಿ D) ದುರ್ಬುದ್ಧಿ

**ಉತ್ತರ** : (B) ಪ್ರೇಮಮತಿ

**12) ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಅವರ ಕಾವ್ಯನಾಮ**

A) ಅಂಬಿಕಾತನಯದತ್ತ B) ಕುವೆಂಪು

C) ಪು. ತಿ. ನ D) ಡಿ. ವಿ. ಜಿ

**ಉತ್ತರ** : (C) ಪು. ತಿ. ನ

**13) ಜಿ.ಎಸ್. ಶಿವರುದ್ರಪ್ಪ ಅವರು ಬರಡಾಗಿರುವ ಕಾಡುಮೇಡುಗಳನ್ನು ಹೀಗೆ ಮುಟ್ಟೋಣ ಎಂದಿದ್ದಾರೆ.**

A) ಕನಸನು ಬಿತ್ತುತ B) ಸೇತುವೆಯಾಗುತ

C) ಹಣತೆಯ ಹಚ್ಚುತ D) ವಸಂತವಾಗುತ

**ಉತ್ತರ** : (D) ವಸಂತವಾಗುತ

**14) ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಜನ್ಮಸ್ಥಳ**

A) ಮೈಸೂರು B) ಬೆಂಗಳೂರು

C) ಶಿವಮೊಗ್ಗ D) ಧಾರವಾಡ

**ಉತ್ತರ** : (D) ಧಾರವಾಡ

**15) 'ಹಲಗಲಿ ಬೇಡರು' ಪದ್ಯದ ಕಂಠಪಾಠ ಸಾಲಿನ ಸರಿಯಾದ ರೂಪ.**

A) ಅತ್ತು ವರ್ಣಿಸಿ ಹಾಳಾಗಿ ಹೋಯಿತು ಹೇಳಲಿ ನಾನೆಷ್ಟಾ

B) ಹೋಯಿತು ಹಾಳಾಗಿ ವರ್ಣಿಸಿ ಹೇಳಲಿ ಅತ್ತು ನಾನೆಷ್ಟಾ

C) ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

D) ಹೇಳಲಿ ವರ್ಣಿಸಿ ಹಾಳಾಗಿ ಹೋಯಿತು ಅತ್ತು ನಾನೆಷ್ಟಾ

**ಉತ್ತರ** : (C) ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**16) ತಂದೆ–ತಾಯಿಯರ ಸಲಹೆಯಂತೆ ಭೀಷ್ಮರ ಬಳಿ ಸಲಹೆ ಕೇಳಿ ಬಂದವನು :**

A) ಭೀಮ

B) ಕರ್ಣ

C) ಅರ್ಜುನ

D) ದುರ್ಯೋಧನ

**ಉತ್ತರ** : (D) ದುರ್ಯೋಧನ

**17) ಕುವೆಂಪುರವರ ಆತ್ಮಕಥನ**

A) ಪ್ರೇಮಕಾಶ್ಮೀರ

B) ಪಕ್ಷಿಕಾಶಿ

C) ಶ್ರೀರಾಮಾಯಣ ದರ್ಶನಂ

D) ನೆನಪಿನ ದೋಣಿಯಲ್ಲಿ

**ಉತ್ತರ** : (D) ನೆನಪಿನ ದೋಣಿಯಲ್ಲಿ

**18) ಸೂರ್ಯದೇವನ ಅನುಗ್ರಹದಿಂದ ಜನಿಸಿದವನು**

A) ಕರ್ಣ

B) ಅರ್ಜುನ

C) ಭೀಮ

D) ಧರ್ಮರಾಯ

**ಉತ್ತರ** : (A) ಕರ್ಣ

**19) ಕಸರತ್ತು ಮಾಡಿ ಹತ್ತಿಪ್ಪತ್ತು ಕುದುರೆ ಕಡಿದವನು**

A) ರಾಮ

B) ಭೀಮ

C) ಹನುಮ

D) ಜಡಗ

**ಉತ್ತರ** : (A) ರಾಮ

**20) ವಾಲ್ಮೀಕಿ ಋಷಿಗಳು ಲವನಿಗೆ ಹೇಳಿ ಹೋಗಿದ್ದು**

A) ಒಡನಾಡಿಗಳೊಂದಿಗೆ ಆಟವಾಡಲು

B) ಯಜ್ಞ ತುರಗವನ್ನು ಕಟ್ಟಲು

C) ಉದ್ಯಾನವನ್ನು ಆರೈಕೆ ಮಾಡಲು

D) ರಾಮನ ಗರ್ವವನ್ನು ಬಿಡಿಸಲು

**ಉತ್ತರ** : (C) ಉದ್ಯಾನವನ್ನು ಆರೈಕೆ ಮಾಡಲು

**21) ‘ಹಕ್ಕಿ ಹಾರುತಿದೆ ನೋಡಿದಿರಾ’ ಪದ್ಯದಲ್ಲಿ ಹಕ್ಕಿ ಕುಕ್ಕಿರುವುದು**

A) ಮನ್ವಂತರಗಳ ಭಾಗ್ಯವನ್ನು

B) ಬೆಳ್ಳಿಯ ಹಳ್ಳಿಯ ಮೇರೆಯನ್ನು

C) ಹೊಸಗಾಲದ ಹಸು ಮಕ್ಕಳನ್ನು

D) ಸಾರ್ವಭೌಮರ ನೆತ್ತಿಯನ್ನು

**ಉತ್ತರ** : (D) ಸಾರ್ವಭೌಮರ ನೆತ್ತಿಯನ್ನು

**22) ಮಾದ್ರಿಯಲೊಂದು ಮಂತ್ರದೊಳುದಿಸಿದ ಇಬ್ಬರು**

A) ಭೀಮ–ದುರ್ಯೋಧನ

B) ನಕುಲ–ಸಹದೇವ

C) ಕರ್ಣ–ಯುಧಿಷ್ಠಿರ

D) ಭೀಮ–ಫಲ್ಗುಣ

**ಉತ್ತರ** : (B) ನಕುಲ–ಸಹದೇವ

**23) ಆಶ್ವಯುಜದ ಭತ್ತದ ಗದ್ದೆಯ ಬಣ್ಣ**

A) ಗಿಳಿ ಹಸುರು

B) ಗುಲಾಬಿ ಕೆಂಪು

C) ಮಲ್ಲಿಗೆ ಬಿಳಿ

D) ಪಡುವಣ ಹಳದಿ

**ಉತ್ತರ** : (A) ಗಿಳಿ ಹಸುರು

**24) ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು**

A) ಭೀಮ

B) ಭೀಷ್ಮ

C) ದುರ್ಯೋಧನ

D) ಧೃತರಾಷ್ಟ್ರ

**ಉತ್ತರ** : (C) ದುರ್ಯೋಧನ

**25) ವೀರಲವ ಪದ್ಯದಲ್ಲಿ ನಾವು ಮೆಚ್ಚಿಕೊಳ್ಳಬೇಕಾದ ಅಂಶ**

A) ರಾಮನ ಅಣತಿಯಂತೆ ಕುದುರೆಯ ಬೆಂಗಾವಲಿಗೆ ನಿಂತ ಶತ್ರುಘ್ನ

B) ಹಸುರು ಹುಲ್ಲಿಗೆ ಎಳಸಿ ಆಶ್ರಮಕ್ಕೆ ಬಂದ ಕುದುರೆ

C) ಗರ್ವವನ್ನು ಬಿಡಿಸುವೆನೆಂಬ ಲವನ ವೀರತನ

D) ಅರಸರ ಕುದುರೆ ಬಿಡಿವರೆಮ್ಮನು ಬಿಡು ಎಂಬ ಪಾರ್ವರ ಮಕ್ಕಳು

**ಉತ್ತರ** : (C) ಗರ್ವವನ್ನು ಬಿಡಿಸುವೆನೆಂಬ ಲವನ ವೀರತನ

**26) ಜಿ.ಎಸ್. ಶಿವರುದ್ರಪ್ಪನವರು ಎಚ್ಚರದಲಿ ಮುನ್ನಡೆಸಬೇಕೆಂದಿರುವುದು**

A) ಬಿರುಗಾಳಿಗೆ ಹೊಯ್ದಾಡುವ ಹಡಗನ್ನು

B) ಮನುಜರ ನಡುವಣ ಅಡ್ಡಗೋಡೆಗಳನ್ನು

C) ಭಯ ಸಂಶಯದೊಳು ಕಂದಿದ ಕಣ್ಣುಗಳನ್ನು

D) ಬರಡಾಗಿರುವ ಕಾಡುಮೇಡುಗಳನ್ನು

**ಉತ್ತರ** : (A) ಬಿರುಗಾಳಿಗೆ ಹೊಯ್ದಾಡುವ ಹಡಗನ್ನು

**27) ವಿವೇಕಾನಂದರನ್ನು 'ಮಾನವತಾಮಿತ್ರ' ಎಂದು ಕರೆದವರು**

A) ದ. ರಾ. ಬೇಂದ್ರೆ

B) ಶಿವರಾಮ ಕಾರಂತ

C) ಕುವೆಂಪು

D) ಜಿ.ಎಸ್. ಶಿವರುದ್ರಪ್ಪ

**ಉತ್ತರ** : (C) ಕುವೆಂಪು

**28) ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದವನು**

A) ರಾಜ್‌ಗುರು

B) ಸುಖ್‌ದೇವ್

C) ಭಗತ್‌ಸಿಂಗ್

D) ಭಟುಕೇಶ್ವರ ದತ್ತ

**ಉತ್ತರ** : (C) ಭಗತ್‌ಸಿಂಗ್

**29)** "**ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು**

**ಉಳುವಾನ ಕಂಡು ನಗುವುದು–**

A) ಗರಕೇಯ ಹುಲ್ಲು B) ಉತ್ತರಾಣಿ ಗಿಡ

C) ತಾವರೆ ಬೇರು D) ಬೀಸುಕಲ್ಲು

**ಉತ್ತರ** : (A) ಗರಕೇಯ ಹುಲ್ಲು

**30)** **ಪುಟ್ಟಪೋರಿಯ ಅಮ್ಮ ಮಲಗಿರುವುದು**

A) ಅರಮನೆಯಲ್ಲಿ B) ಒಡೆಯನ ಅಂಗಳದಲ್ಲಿ

C) ಮಾವಿನ ಮರದಡಿಯಲ್ಲಿ D) ಗುಡಿಸಲಿನಲ್ಲಿ

**ಉತ್ತರ** : (D) ಗುಡಿಸಲಿನಲ್ಲಿ

**31)** **ಕೆಳಗಿನ ಪದಗಳಲ್ಲಿ ಕ್ರಿಯಾ ಸಮಾಸಕ್ಕೆ ಉದಾಹರಣೆ**

A) ಇಮ್ಮಾವು B) ಕಡೆಗಣ್ಣು

C) ಕಣ್ದೆರೆ D) ತಲೆನೋವು

**ಉತ್ತರ** : (C) ಕಣ್ದೆರೆ

**32)** **'ಮಾತಂತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ**

A) ಅನುನಾಸಿಕ B) ಲೋಪ

C) ವೃದ್ಧಿ D) ಯಣ್

**ಉತ್ತರ** : (B) ಲೋಪ

**33)** **ಹಳಗನ್ನಡದ ದ್ವಿತೀಯಾ ವಿಭಕ್ತಿಯ ಪ್ರತ್ಯಯ**

A) ಮ್ B) ಒಳ್

C) ಅತ್ತಣಿಂ D) ಅಂ

**ಉತ್ತರ** : (D) ಅಂ

**34) ಕಲಶ ಪದದ ತದ್ಭವ ರೂಪ**

A) ವರುಸ

B) ಅಂಕುಸ

C) ಕಳಸ

D) ಕಲ್ಮಶ

**ಉತ್ತರ** : (C) ಕಳಸ

**35) ಹೆತ್ತತಾಯಿ ಹೊತ್ತನಾಡು–ಈ ಗಾದೆಯ ಮುಂದಿನ ಭಾಗ :**

A) ಕುಡಿಕೆ ಹೊನ್ನು ಸಾಲದು

B) ಸ್ವರ್ಗಕ್ಕಿಂತ ಮಿಗಿಲು

C) ಅನಾಚಾರವೇ ನರಕ

D) ಹೊಳೆಯುವುದೆಲ್ಲ ಚಿನ್ನವಲ್ಲ

**ಉತ್ತರ** : (B) ಸ್ವರ್ಗಕ್ಕಿಂತ ಮಿಗಿಲು

**36) ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದು :**

A) ರೂಪಕಾಲಂಕಾರ

B) ಉಪಮಾಲಂಕಾರ

C) ಉತ್ಪ್ರೇಕ್ಷಾಲಂಕಾರ

D) ದೃಷ್ಟಾಂತಾಲಂಕಾರ

**ಉತ್ತರ** : (B) ಉಪಮಾಲಂಕಾರ

**37) ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವ ಅವ್ಯಯಗಳನ್ನು ಹೀಗೆನ್ನುತ್ತೇವೆ**

A) ಅವಧಾರಣಾರ್ಥಕಾವ್ಯಯ

B) ಅನುಕರಣಾವ್ಯಯ

C) ಸಾಮಾನ್ಯಾವ್ಯಯ

D) ಕ್ರಿಯಾರ್ಥಕಾವ್ಯಯ

**ಉತ್ತರ** : (C) ಸಾಮಾನ್ಯಾವ್ಯಯ

**38) 'ಸಾಮ್ರಾಜ್ಯ' ಪದದಲ್ಲಿ ಕಂಡುಬರುವ ಅಕ್ಷರಗಣ**

A) ಮ ಗಣ

B) ತ ಗಣ

C) ನ ಗಣ

D) ಸ ಗಣ

**ಉತ್ತರ :** (B) ತ ಗಣ

**39) ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸಬೇಕಾದ ಲೇಖನ ಚಿಹ್ನೆ :**

A) ಉದ್ಧರಣ

B) ಅರ್ಧವಿರಾಮ

C) ಆವರಣ

D) ಅಲ್ಪವಿರಾಮ

**ಉತ್ತರ :** (C) ಆವರಣ

**40) ಅಧಿಕಾರಿಗಳಿಗೆ ಪತ್ರವನ್ನು ಬರೆಯುವಾಗ ಆರಂಭದ ಸಂಬೋಧನೆ ಹೀಗಿರಬೇಕು**

A) ಪ್ರೀತಿಯ ಗೆಳೆಯನಿಗೆ

B) ಪೂಜ್ಯ ಗುರುಗಳೇ

C) ಮಾನ್ಯರೇ

D) ತೀರ್ಥರೂಪ

**ಉತ್ತರ :** (C) ಮಾನ್ಯರೇ

**A**

**CCE RF**
**CCE RR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003**

**KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022**

**S.S.L.C. EXAMINATION, MARCH / APRIL, 2022**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 03. 2022 ] **ಸಂಕೇತ ಸಂಖ್ಯೆ : 01-K**

Date : 28. 03. 2022 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 6 × 1 = 6 |
| 1. | 'ಮಳೆಗಾಲ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ<br>***ಉತ್ತರ :*** (ಸಿ) ಆದೇಶ ಸಂಧಿ | |
| 2. | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಠನ ಚಿಹ್ನೆ<br>(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ<br>***ಉತ್ತರ :*** (ಎ) ಉದ್ಧರಣ ಚಿಹ್ನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ‘ತಲೆನೋವು’ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ | |
| | (ಎ) ತತ್ಪುರುಷ ಸಮಾಸ (ಬಿ) ಕ್ರಿಯಾ ಸಮಾಸ | |
| | (ಸಿ) ಅಂಶಿ ಸಮಾಸ (ಡಿ) ದ್ವಿಗು ಸಮಾಸ | |
| | ***ಉತ್ತರ :*** (ಎ) ತತ್ಪುರುಷ ಸಮಾಸ | |
| 4. | ‘ಸಾವಿತ್ರಿಯಲ್ಲಿ’ ಈ ಪದದಲ್ಲಿರುವ ವಿಭಕ್ತಿಯ ಹೆಸರು | |
| | (ಎ) ದ್ವಿತೀಯಾ (ಬಿ) ತೃತೀಯಾ | |
| | (ಸಿ) ಪಂಚಮೀ (ಡಿ) ಸಪ್ತಮೀ | |
| | ***ಉತ್ತರ :*** (ಡಿ) ಸಪ್ತಮೀ | |
| 5. | ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ | |
| | (ಎ) ೦೨ (ಬಿ) ೦೫ | |
| | (ಸಿ) ೦೬ (ಡಿ) ೦೭ | |
| | ***ಉತ್ತರ :*** (ಬಿ) ೦೫ | |
| 6. | ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು | |
| | (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ | |
| | (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ | |
| | ***ಉತ್ತರ :*** (ಬಿ) ಸಂಯೋಜಿತ ವಾಕ್ಯ | |
| II. | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 7. | ಮಕ್ಕಳುಮರಿ : ಜೋಡುನುಡಿ :: ಓಡಿಓಡಿ : ......................... . | |
| | ***ಉತ್ತರ :*** ದ್ವಿರುಕ್ತಿ | |
| 8. | ವರ್ಷ : ವರುಸ :: ಕಾರ್ಯ : ......................... . | |
| | ***ಉತ್ತರ :*** ಕಜ್ಜ | |
| 9. | ತಿನ್ನುತ್ತೇನೆ : ವರ್ತಮಾನಕಾಲ :: ತಿನ್ನುವೆನು : ......................... . | |
| | ***ಉತ್ತರ :*** ಭವಿಷತ್‌ಕಾಲ | |
| 10. | ಮಾಡಲಿ : ವಿಧ್ಯರ್ಥಕ :: ಮಾಡಿಯಾರು : ................... . | |
| | ***ಉತ್ತರ :*** ಸಂಭಾವನಾರ್ಥಕ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** <br> **(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 7 × 1 = 7 |
| 11. | ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ? <br> ***ಉತ್ತರ :*** <br> ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು. | |
| 12. | ಮನೆಮಂಚಮ್ಮ ಯಾರು ? <br> ***ಉತ್ತರ :*** <br> ಮನೆಮಂಚಮ್ಮ ಗ್ರಾಮದೇವತೆ. | |
| 13. | ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು ? <br> ***ಉತ್ತರ :*** <br> ಶಾನುಭೋಗರ 'ಬ್ರಹ್ಮಾಸ್ತ್ರ' ಖಿರ್ದಿಪುಸ್ತಕ. | |
| 14. | ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ? <br> ***ಉತ್ತರ :*** <br> ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು. | |
| 15. | ನದೀಜಲಗಳು ಏನಾಗಿವೆ ? <br> ***ಉತ್ತರ :*** <br> ನದೀಜಲಗಳು ಕಲುಷಿತವಾಗಿವೆ. | |
| 16. | ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ? <br> ***ಉತ್ತರ :*** <br> ಆಶ್ವಯುಜದ ಬತ್ತದ ಗದ್ದೆ ಗಿಳಿಯೆದೆ ಬಣ್ಣದ ಹಸುರಿನಂತಿದೆ. | |
| 17. | ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ? <br> ***ಉತ್ತರ :*** <br> ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ. | |
| IV. | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | 10 × 2 = 20 |
| 18. | ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ? <br> ***ಉತ್ತರ :*** <br> ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಕೆಲಸ ಮಾಡುವವರು ಸಹ ಹೆಣ್ಣುಮಕ್ಕಳೇ. ಯಾವುದಾದರೊಂದು ದೊಡ್ಡ ಅಂಗಡಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹೋದರೆ ಟೈಪಿಸ್ಟ್, ಕಾರಕೂನ ಕೆಲಸದಲ್ಲಿ ಹೆಣ್ಣುಮಕ್ಕಳೆ ನಿಯುಕ್ತರಾಗಿರುತ್ತಾರೆ. ಸಿನಿಮಾ ಗೃಹದಲ್ಲಿ ಜಾಗವನ್ನು ಹುಡುಕಿ ಕೊಡುವವರು ಸಹ ಹೆಣ್ಣುಮಕ್ಕಳೆ. ಹೆಣ್ಣುಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿ ಕಾಣಬಹುದು. ಹೀಗೆ ಲಂಡನ್ನಿನ ಹೆಣ್ಣುಮಕ್ಕಳು ಬೇರೆ ಬೇರೆ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ. | |
| 19. | ವಿ.ಕೃ. ಗೋಕಾಕ್ ಅವರು ಟೊಪ್ಪಿಗೆಯ ವಿಶೇಷತೆಯನ್ನು ಹೇಗೆ ದಾಖಲಿಸಿದ್ದಾರೆ ?<br>***ಉತ್ತರ :***<br>ಲೇಖಕರಾದ ವಿ.ಕೃ. ಗೋಕಾಕ್ ಅವರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳ ಟೊಪ್ಪಿಗೆಯನ್ನು ಕುತೂಹಲದಿಂದ ನೋಡುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಛವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯರಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ. ಹೀಗೆ ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ದಾಖಲಿಸಿದ್ದಾರೆ. | |
| 20. | ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?<br>***ಉತ್ತರ :***<br>ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಹಾಗೂ ಗ್ರಾಮಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ ಗ್ರಾಮ ನೈರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. | |
| 21. | ನೆಹರೂ ಅವರು ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿರುವ ಮಾತುಗಳಾವುವು ?<br>***ಉತ್ತರ :***<br>"ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ನೆಹರೂರವರು ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದ್ದಾರೆ. | |
| 22. | ಹಲಗಲಿಗೆ ದಂಡು ಬರಲು ಕಾರಣವೇನು ?<br>***ಉತ್ತರ :***<br>ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಆದೇಶವನ್ನು ಜಾರಿಗೆ ತಂದರು. ಈ ಆದೇಶವನ್ನು ವಿರೋಧಿಸಿ ಹಲಗಲಿ ಬೇಡರು ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ, ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು, ಕಾರಕೂನನ ಕಪಾಳಕ್ಕೆ ಬಡಿದು, ಮುಂಗಾರಿನ ಸಿಡಿಲು ಸಿಡಿದ ಹಾಗೆ ಗುಂಡು ಹೊಡೆದರು. ಇದರಿಂದ ಕ್ರೋಧಗೊಂಡ ಬ್ರಿಟಿಷ್ ಅಧಿಕಾರಿ ದಂಗೆ ಎದ್ದವರನ್ನು ಬಗ್ಗುಬಡಿಯಲು ಹಲಗಲಿಗೆ ದಂಡನ್ನು ಕಳುಹಿಸಿದನು. | |
| 23. | ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?<br>***ಉತ್ತರ :***<br>ಕರ್ಣನು ಕೃಷ್ಣನಿಗೆ 'ಮರುಳು ಮಾಧವ, ನಾನು ರಾಜ್ಯದ ಸಿರಿ ಸಂಪತ್ತಿಗೆ ಸೋಲುವವನಲ್ಲ. ಪಾಂಡವರು, ದುರ್ಯೋಧನರು ನನ್ನ ಸೇವೆಯನ್ನು ಮಾಡುವುದು ಇಷ್ಟವಿಲ್ಲ. ನನ್ನನ್ನು ಕಾಪಾಡಿದ ನನ್ನ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸಬೇಕೆಂಬ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ' ಎಂದು ಹೇಳಿದನು. | |
| 24. | ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?<br>***ಉತ್ತರ :***<br>"ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ." ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿ ಶೂದ್ರರು, ಅಸ್ಪೃಶ್ಯರು ಸ್ವಾತಂತ್ರ್ಯಹೀನರಾಗಿ ಗುಲಾಮತನ ಅನುಭವಿಸುತ್ತಿದ್ದಾರೆ ಎಂದು ವಿವೇಕಾನಂದರು ಜಾತಿ ವ್ಯವಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. | |
| 25. | 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?<br>***ಉತ್ತರ :***<br>ಒಡೆಯನ ಮನೆಯ ಅಂಗಳದಲ್ಲಿ ಇರುವ ಮಾವಿನ ಮರಗಳು ಮೈ ತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಸ್ವಚ್ಛಂದವಾಗಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ವಸಂತನ ಆಗಮನದ ಹಿನ್ನೆಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | ಭಗತ್‌ಸಿಂಗ್ ಹಾಗೂ ಆತನ ಸಹಚರರು ಹೇಗೆ ಹುತಾತ್ಮರಾದರು ? | |
| | ***ಉತ್ತರ :*** | |
| | ಹನ್ನೆರಡು ವರ್ಷದ ಬಾಲಕ ಭಗತ್‌ಸಿಂಗ್ ಅಮೃತಸರದ ಜಲಿಯನ್ ವಾಲಾಬಾಗ್‌ನಿಂದ ಸಂಗ್ರಹಿಸಿ ತಂದಿದ್ದ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದನು. ಮುಂದೆ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರದತ್ತರೊಂದಿಗೆ ಹಸನ್ಮುಖಿಯಾಗಿ ಮರಣದಂಡನೆಗೆ ಗುರಿಯಾಗಿ ಹುತಾತ್ಮರಾದರು. | |
| 27. | ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಜನಪದರು ಒಗಟಿನಲ್ಲಿ ಹೇಗೆ ವಿವರಿಸಿದ್ದಾರೆ ? | |
| | ***ಉತ್ತರ :*** | |
| | ಸಾಮಾನ್ಯವಾಗಿ ಗಿಡಗಳು ಭೂಮಿಯ ಮೇಲೆ ಮಣ್ಣಿನ ಸಹಾಯದಿಂದ ಹುಟ್ಟಿ ಬೆಳೆಯುತ್ತವೆ. ಆದರೆ ಕಮಲವು ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲೇ ಬೆಳೆದರೂ ಒಂದು ಗಿಡದ ರೂಪವನ್ನು ಹೊಂದುತ್ತದೆ. ಹೀಗೆ ಕೆಸರಿಗೂ ಕಮಲಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಜನಪದರು ಒಗಟಿನಲ್ಲಿ ವಿವರಿಸಿದ್ದಾರೆ. | |
| V. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ದೇವನೂರ ಮಹಾದೇವ : | |
| | ***ಉತ್ತರ :*** | |
| | ದೇವನೂರ ಮಹಾದೇವ ಅವರು ಕ್ರಿ.ಶ. ೧೯೪೮ ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತಾಲ್ಲೂಕಿನ ದೇವನೂರಿನಲ್ಲಿ ಜನಿಸಿದರು. ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ಆಡುಮಾತಿನ ಧ್ವನಿಶಕ್ತಿಯನ್ನು ಎತ್ತರಿಸಿದ ಶಬ್ದಶಿಲ್ಪಿ ಇವರು. | |
| | ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ ಶ್ರೀಯುತರ ಪ್ರಮುಖ ಕೃತಿಗಳು. ಇವರ 'ಕುಸುಮಬಾಲೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಒಡಲಾಳ' ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ. | |
| 29. | ಕುಮಾರವ್ಯಾಸ : | |
| | ***ಉತ್ತರ :*** | |
| | ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪ ಕ್ರಿ.ಶ. ೧೪೩೦ ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದನು. ಆದಿಕವಿ ಪಂಪನ ಅನಂತರ ವ್ಯಾಸರ ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಕನ್ನಡದಲ್ಲಿ ರಚಿಸಿ ಪಂಡಿತರಿಗೆ ಮಾತ್ರವಲ್ಲದೇ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದನು. | |
| | ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ 'ಐರಾವತ' ಎಂಬ ಕೃತಿಯನ್ನು ರಚಿಸಿದ್ದಾನೆಂದು ತಿಳಿದುಬಂದಿದೆ. 'ರೂಪಕಾಲಂಕಾರ'ವನ್ನು ನಿರರ್ಗಳವಾಗಿ ಪ್ರಯೋಗಿಸಿ "ರೂಪಕಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದನ್ನು ಪಡೆದಿದ್ದಾನೆ. ವೀರನಾರಾಯಣನ ಪರಮಭಕ್ತನಾದ ಈತ ಭಾಗವತ ಸಂಪ್ರದಾಯವನ್ನು ಸರಳ, ಸುಂದರ ಹಾಗೂ ರಂಜನೀಯವಾಗಿ ಪರಿಚಯಿಸಿ ಜನಪ್ರಿಯಗೊಳಿಸಿದ್ದಾನೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ 'ಗದುಗಿನ ಭಾರತ' ಅತ್ಯಂತ ಜನಪ್ರಿಯವಾದ ಮಹಾಕಾವ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VI. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

30. ಏನು ಹೇಳ್ವೈ ಕರ್ಣ ಚಿತ್ತ

ಗ್ಲಾನಿ ಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

— U (೩) | — — (೪) | — U (೩) | — — (೪)

ಏನು | ಹೇಳ್ವೈ | ಕರ್ಣ | ಚಿತ್ತ | = ೧೪ ಮಾತ್ರೆಗಳು

— U (೩) | — U U (೪) | U U U (೩) | — — (೪)

ಗ್ಲಾನಿ | ಯಾವುದು | ಮನಕೆ | ಕುಂತೀ | = ೧೪ ಮಾತ್ರೆಗಳು

— U (೩) | U U U U (೪) | — U (೩) | — U U (೪) | — U (೩) | — U U (೪) | — (ಗುರು)

ಸೂನು | ಗಳಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ = ೨೧ + ೨ = ೨೩ ಮಾತ್ರೆಗಳು

ಇದು ಮಾತ್ರಾಗಣಾಧಾರಿತ 'ಭಾಮಿನಿ' ಷಟ್ಪದಿಯ ಲಕ್ಷ್ಯವಾಗಿದೆ.

| | | |
|---|---|---|
| VII. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

31. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಸಮನ್ವಯ :* *ಉಪಮೇಯ :* ಭೀಮ ದುರ್ಯೋಧನರು<br>*ಉಪಮಾನ :* ಮದಗಜಗಳು<br>*ಉಪಮಾವಾಚಕ ಪದ :* ಅಂತೆ<br>*ಸಮಾನಧರ್ಮ :* ಹೋರಾಟ<br>ಇಲ್ಲಿ ಉಪಮೇಯವಾದ 'ಭೀಮ ದುರ್ಯೋಧನರನ್ನು' ಉಪಮಾನವಾದ 'ಮದಗಜಗಳಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಹೋರಾಟ' ಎಂಬ ಸಮಾನಧರ್ಮ ಇರುವುದರಿಂದ ಇದು ಪೂರ್ಣೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ. | |
| VIII. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | $1 \times 3 = 3$ |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಮಾತೇ ಮುತ್ತು, ಮಾತೇ ಮೃತ್ಯು.<br>***ಅಥವಾ***<br>ಕೂಡಿ ಬಾಳಿದರೆ ಸ್ವರ್ಗಸುಖ. | |
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | $6 \times 3 = 18$ |
| | ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"<br>***ಉತ್ತರ :***<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ಶ್ರೀರಂಗ ಮತ್ತು ನಾ. ಕಸ್ತೂರಿ ಸಂಪಾದಿಸಿರುವ 'ಏಕಾಂಕ ನಾಟಕಗಳು' ಕೃತಿಯಿಂದ ಆಯ್ದ ಪು.ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ' ಗೀತನಾಟಕದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಶ್ರೀರಾಮನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಶಬರಿ ರಾಮಧ್ಯಾನದಲ್ಲಿ ತೊಡಗಿ, ರಾಮನಿಗೆಂದು ಆರಿಸಿ ತಂದ ಈಗ ಬಾಡಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹೋಗಿರುವ ಹೂ, ಹಣ್ಣು, ತಳಿರುಗಳನ್ನು ವಿಂಗಡಿಸುತ್ತಾ, ಅವುಗಳ ಜಾಗದಲ್ಲಿ ಹೊಸದನ್ನು ಇಡುತ್ತಾ ಹೂಮಾಲೆಯನ್ನು ಕಟ್ಟಿ, ಮುತ್ತಿಟ್ಟು, ಹಾಡುತ್ತಾ ಮತಂಗಾಶ್ರಮದಲ್ಲಿ ಇರುತ್ತಾಳೆ. ಇದೇ ಸಮಯದಲ್ಲಿ ತಪಸ್ವಿಯಾದ ದನುವಿನ ಸೂಚನೆಯಂತೆ ರಾಮಲಕ್ಷ್ಮಣರು ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಆಗ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡ ರಾಮನು ಈ ಮಾತನ್ನು ಹೇಳುತ್ತಾನೆ. | |
| | ***ಸ್ವಾರಸ್ಯ :*** ಶಬರಿಯ ಮುಗ್ಧತೆ, ತಾಳ್ಮೆ, ಶ್ರೀರಾಮನನ್ನು ಕಾಣಬೇಕೆಂಬ ಹಂಬಲ, ಕಾತುರ, ಶ್ರೀರಾಮನ ಸರಳ, ಸಜ್ಜನಿಕೆ, ಹಿತ-ಮಿತ ಮೃದುವಚನ, ಲಕ್ಷ್ಮಣನ ವಿನಯದ ಸಹಚರತೆ ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. | |
| 34. | "ನಾನು ಮುಖ ಮೇಲಾಗಿ ಬಿದ್ದಿದ್ದನೆ ?" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಎ.ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಸಂಕಲನದಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠ ದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಶಾನುಭೋಗರು ಗಟ್ಟಿಮನಸ್ಸಿನವರಾಗಿದ್ದರಿಂದ ಬೇಗ ಚೇತರಿಸಿಕೊಂಡೆದ್ದು ನಡೆದ ಸಂಗತಿಯನ್ನೆಲ್ಲಾ ನೆನಪಿಗೆ ತಂದುಕೊಂಡರು. ಮೈಕೈ ನಡುಗುತ್ತಿತ್ತೇ ಹೊರತು ಗಾಯವೇನೂ ಆಗಿರಲಿಲ್ಲ. ಖಿರ್ದಿಪುಸ್ತಕವನ್ನು ಮತ್ತಷ್ಟು ಭದ್ರವಾಗಿ ಹಿಡಿದುಕೊಂಡರು. ಆದರೆ ತಾನು ಬದುಕುಳಿದದ್ದು ಹೇಗೆ ? ಹುಲಿ ತನ್ನನ್ನು ಎಳೆದುಕೊಂಡು ಹೋಗಲಿಲ್ಲವೇಕೆ ? ಎಂಬ ವಿಸ್ಮಯ ಶಾನುಭೋಗರ ಮನಸ್ಸನ್ನೆಲ್ಲಾ ಆವರಿಸಿತು. ಈ ಗೊಂದಲ ಪರಿಹರಿಸಿಕೊಳ್ಳಲು ಗಾಡಿಯವರನ್ನು ಕುರಿತು ಶಾನುಭೋಗರು ಮೇಲಿನಂತೆ ಪ್ರಶ್ನಿಸುತ್ತಾರೆ. | |
| | ***ಸ್ವಾರಸ್ಯ :*** 'ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು' ಎಂಬಂತೆ, ಸಾವಿನ ದವಡೆಯಿಂದ ಪಾರಾಗಿ ಬಂದಾಗ ಉಂಟಾಗುವ ವಿಸ್ಮಯ, ನೆಮ್ಮದಿಯ ನಿಟ್ಟುಸಿರು, ಹುಲಿಯ ಬಗೆಗಿನ ಮೆಚ್ಚುಗೆ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ. | |
| 35. | "ಹುಸಿಯದ ಬೇಹಾರಿಯೇ ಇಲ್ಲ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** 'ಧರ್ಮಬುದ್ಧಿಯೇ ಹೊನ್ನನ್ನೆಲ್ಲ ಕೊಂಡೊಯ್ದಿರುವನು' ಎಂದು ಮರ ಸಾಕ್ಷಿ ನುಡಿದಾಗ ಇದರಲ್ಲಿ ಏನೋ ಮೋಸವಿದೆ ಎಂದು ಧರ್ಮಬುದ್ಧಿ ಮರವನ್ನು ಪ್ರದಕ್ಷಿಣೆ ಬಂದು ನೋಡಿದಾಗ ಮರದಲ್ಲಿನ ದೊಡ್ಡ ಪೊಟರೆ, ಮನುಷ್ಯ ಸಂಚಾರವನ್ನು ಗಮನಿಸಿ, ದುಷ್ಟಬುದ್ಧಿಯ ಕುತಂತ್ರವನ್ನು ಬಯಲು ಮಾಡಬೇಕೆಂದು ನಿರ್ಧರಿಸಿ, ತಾನೇ ಹೊನ್ನನ್ನು ಕದ್ದಿರುವೆನು, ಮನೆಗೆ ಕೊಂಡೊಯ್ಯಬೇಕೆಂಬಷ್ಟರಲ್ಲಿ ಬೆಳಕಾಯಿತು. ಆದ್ದರಿಂದ ಈ ಮರದ ಪೊಟರೆಯಲ್ಲಿಟ್ಟಿದ್ದೆ. ಮರುದಿನ ಬಂದು ನೋಡಿದಾಗ ಆ ಹೊನ್ನನ್ನು ಸರ್ಪವೊಂದು ಸುತ್ತಿಕೊಂಡಿತ್ತು. ತೆಗೆದುಕೊಳ್ಳಲಾಗದೆ ಇಲ್ಲಿಯೇ ಬಿಟ್ಟಿದ್ದೇನೆ. ಈಗ ನಿಮ್ಮೆಲ್ಲರ ಎದುರಿನಲ್ಲಿ ಹೊಗೆ ಹಾಕಿ ಹಾವನ್ನು ಓಡಿಸಿ ಹೊನ್ನನ್ನು ಕೊಡುತ್ತೇನೆ ಎಂದು ಧರ್ಮಬುದ್ಧಿ ಧರ್ಮಾಧಿಕರಣರಿಗೆ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಧರ್ಮಬುದ್ಧಿಯ ಗುಣ, 'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂಬಂತೆ ತನ್ನ ಮೇಲಿನ ಆರೋಪದಿಂದ ಮುಕ್ತನಾಗಲು ಹಾಗೂ ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾಗುವಂತೆ ಮಾಡುವ ಧರ್ಮಬುದ್ಧಿಯ ಜಾಣ್ಮೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 36. | "ಪ್ರೀತಿಯ ಹಣತೆಯ ಹಚ್ಚೋಣ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸುತ್ತ ವಾಕ್ಯವನ್ನು ಡಾ. ಜಿ.ಎಸ್. ಶಿವರುದ್ರಪ್ಪನವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಎಂಬ ಕವನಸಂಕಲದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ನಮ್ಮ ಸುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವುದಕ್ಕಾಗಿ ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ. ಆ ಮೂಲಕ ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ನಿರ್ಮೂಲನೆ ಮಾಡಬಹುದು. ಹೀಗೆ ಸಂಕಲ್ಪ ಮತ್ತು ಅನುಷ್ಠಾನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕುರಿತು ತಮ್ಮ ಅಭಿಪ್ರಾಯವನ್ನು ತಿಳಿಸುವ ಸಂದರ್ಭದಲ್ಲಿ ಕವಿ ಶಿವರುದ್ರಪ್ಪ ಅವರು ಈ ಮಾತನ್ನು ಹೇಳಿದ್ದಾರೆ. | |
| | ***ಸ್ವಾರಸ್ಯ :*** ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಅಸಾಧ್ಯವಾದದ್ದು ಯಾವುದು ಇಲ್ಲ ಎಂಬಿತ್ಯಾದಿ ಅಂಶಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿವೆ. | |
| 37. | "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದರು. ಈ ಕಾಯ್ದೆಯನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನು ಕೊಡಲೊಪ್ಪದೆ ಕುಂಪಣಿ ಸರ್ಕಾರದ ವಿರುದ್ಧ ದಂಗೆ ಎದ್ದಾಗ ಬ್ರಿಟಿಷ್ ಸರ್ಕಾರ ಆದೇಶ ಮಾಡುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ. | |
| | ***ಸ್ವಾರಸ್ಯ :*** ಬ್ರಿಟಿಷರು ಹೊಸ ಹೊಸ ಕಾಯಿದೆಗಳನ್ನು ಜಾರಿಗೆ ತರುವುದರ ಮೂಲಕ ಭಾರತೀಯರ ಮೇಲೆ ನಿರಂತರವಾಗಿ ದಬ್ಬಾಳಿಕೆ, ದೌರ್ಜನ್ಯಗಳನ್ನು ಎಸಗುತ್ತಿದ್ದರು ಎಂಬುದನ್ನು ಇಲ್ಲಿ ಅತ್ಯಂತ ಗಂಭೀರವಾಗಿ ವ್ಯಕ್ತಪಡಿಸಲಾಗಿದೆ. | |
| 38. | "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಕುವೆಂಪುರವರು ರಚಿಸಿರುವ 'ಪಕ್ಷಿಕಾಶಿ' ಕವನ ಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಕುವೆಂಪು ಅವರು ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನ ಸೌಂದರ್ಯಾನುಭವವನ್ನು ಅನುಭವಿಸುತ್ತಾ ತಲ್ಲೀನರಾಗಿರುವುದನ್ನು ವರ್ಣನೆ ಮಾಡುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.<br>***ಸ್ವಾರಸ್ಯ :*** ನವರಾತ್ರಿಯ ಸಂದರ್ಭದಲ್ಲಿ ಮಲೆನಾಡಿನ ತುಂಬೆಲ್ಲಾ ಎತ್ತ ನೋಡಿದರತ್ತ ಹಸುರು ವ್ಯಾಪಿಸಿರುತ್ತದೆ. ಈ ಸಮಯದಲ್ಲಿ ಕವಿಯ ಆತ್ಮವು ರಸಪಾನದಿಂದ ಮಿಂದು ಹಸುರಾಗಿದೆ. ಆ ಮೂಲಕ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಂಬಂಧ, ಪ್ರಕೃತಿಯ ರಸಸ್ವಾದನೆ ಹಾಗೂ ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿ ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 39. | ನೀಲಮೇಘಮಂಡಲ ..........................................<br>..................................................................<br>..................................................................<br>..................................................................<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಅಥವಾ***<br>ಯುಗ-ಯುಗಗಳ ..........................................<br>..................................................................<br>..................................................................<br>..................................................................<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಉತ್ತರ :***<br>ನೀಲಮೇಘಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ? | |
| XI. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।<br>ನೊರ್ವನೇ ವೀರನಾತನ ಯಜ್ಞತುರಗಮಿದು ।<br>ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥<br>ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।<br>ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।<br>ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದಿದ್ದನು ॥<br>***ಉತ್ತರ :***<br>ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ದೇಶದೇಶಗಳನ್ನು ಸುತ್ತಾಡಿ ವಾಲ್ಮೀಕಿ ಆಶ್ರಮಕ್ಕೆ ಬರುತ್ತದೆ. ಆಗ ತನ್ನ ಒಡನಾಡಿಗಳ ಜೊತೆಗೂಡಿ ಬರುತ್ತಿದ್ದ ಲವನು ಕುದುರೆಯನ್ನು ಕಂಡು ಅದರ ಬಳಿಗೆ ಬಂದು, ಅದರ ನೆತ್ತಿಯ ಮೇಲಿದ್ದ ಪಟ್ಟದ ಲಿಖಿತವನ್ನು ಓದುತ್ತಾನೆ. ಇಡೀ ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಇದು ಆತನ ಯಜ್ಞ ಕುದುರೆ. ಇದನ್ನು ನಿರ್ವಹಿಸುವವರು ಯಾರಾದರೂ ಇದ್ದರೆ ತಡೆಯಲಿ ಎಂದಿರ್ದ ಲೇಖನವನ್ನು ಓದಿ ಕೋಪಗೊಂಡು ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ಮಾತೆಯನ್ನು ಸರ್ವಜನರು ಬಂಜೆಯೆನ್ನದಿರುವರೆ ? ತನಗೆ ಇರುವ ಶಕ್ತಿ ಸಾಮರ್ಥ್ಯವಾದರೂ ಏತಕ್ಕೆ ? ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು.<br>ಲವಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾರೆ. ಕಷ್ಟ-ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿ ಹಾಗೂ ಲವನಿಗೆ ತನ್ನ ತಾಯಿಯ ಮೇಲಿದ್ದ ಗೌರವ, ಅಭಿಮಾನ ಇತ್ಯಾದಿ ಅಂಶಗಳು ಈ ಪದ್ಯದಲ್ಲಿ ಅಡಕವಾಗಿರುವ ಉತ್ತಮ ಮೌಲ್ಯಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?<br>***ಅಥವಾ***<br>ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.<br>***ಉತ್ತರ :***<br>ರಾಹಿಲನು ಮುದುಕಿಯನ್ನು 'ಅಮ್ಮ, ಈಗ ನಿಮ್ಮ ಮಗ ಎಲ್ಲಿದ್ದಾನೆ ?' ಎಂದು ಕೇಳಿದಾಗ ಮುದುಕಿಯು "ಯುದ್ಧಕ್ಕೆ ಹೋಗಿದ್ದಾನೆ! ನನ್ನ ಮಗನಿನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ. ಎದೆಯ ಗಾಯ ಇಂದಿಗೂ ಇದೆ ನೋಡು. ಎಲ್ಲ ದುಃಖವನ್ನು ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಕೊನೆಯ ಮಾತನ್ನು ಹೇಳುವಾಗ ಮುದುಕಿಯ ಕಂಠ ಗದ್ಗದವಾಗಿ ಮುಂದೆ ಮಾತೇ ಹೊರಡಲಿಲ್ಲ. ಹೀಗೆ ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸಿದಳು.<br>***ಅಥವಾ***<br>ದೇಶದ ಗಡಿಭಾಗದಲ್ಲಿ ಸಮುದ್ರದ ಮೇಲಿನ ಆಕಾಶದಲ್ಲಿ ಹಾರುತ್ತಿದ್ದ ಯುದ್ಧ ವಿಮಾನವು ವೈರಿಗಳ ವೈಮಾನಿಕ ದಾಳಿಯಿಂದ ನುಚ್ಚುನೂರಾಗಿ ಸಮುದ್ರದ ಮೇಲೆ ಬಿದ್ದಿತು. ಆಗ ಅದರಲ್ಲಿದ್ದ ಡಾಕ್ಟರ್ ರಾಹಿಲನು ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಕಷ್ಟಪಟ್ಟು ನೀರಿನಲ್ಲಿ ಈಜಿ ದಡ ಸೇರಿ ಅಲ್ಲಿಯೇ ಇದ್ದ ಅನ್ಯದೇಶದವರ ಮನೆಗೆ ತೆವಳಿಕೊಂಡು ಬಂದು ಬಾಗಿಲು ತಟ್ಟುತ್ತಾನೆ. ಬಾಗಿಲು ತೆರೆದ ಮುದುಕಿಯ ಸೊಸೆಯು ಹೆರಿಗೆಯ ಬೇನೆಯಿಂದ ಬಳಲುತ್ತಿರುತ್ತಾಳೆ. ಆ ಸಮಯದಲ್ಲಿ ವೈದ್ಯನಾಗಿದ್ದ ರಾಹಿಲನು ಅಮ್ಮಾ, ನಾನೋರ್ವ ಡಾಕ್ಟರ್. ನಾನು ಆಕೆಯನ್ನು ಪರೀಕ್ಷಿಸಲೇ ? ಎಂದಾಗ ಮುದುಕಿಯು ನೀರಲ್ಲಿ ಒದ್ದೆಯಾಗಿದ್ದ. ರಾಹಿಲನನ್ನು ನೋಡಿ ತನ್ನ ಮಗನ ಬಟ್ಟೆಯನ್ನು ತಂದು ಕೊಡುತ್ತಾಳೆ. ನಂತರ ರಾಹಿಲನು ಕುಳಿತಲ್ಲೇ ಬಟ್ಟೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬದಲಾಯಿಸಿದನು ತನ್ನ ಕಾಲಿನ ನೋವನ್ನು ಮರೆತು ಮುದುಕಿಯ ಸೊಸೆಯನ್ನು ಪರೀಕ್ಷೆ ಮಾಡಿ ಮಗುವನ್ನು ರಕ್ಷಿಸಲು ಸಾಧ್ಯವಾಗದಿದ್ದರೂ ತಾಯಿಯನ್ನು ಉಳಿಸುವಲ್ಲಿ ಯಶಸ್ವಿಯಾಗುತ್ತಾನೆ.<br>ಅದೇ ಸಮಯದಲ್ಲಿ ಅವನನ್ನು ಹುಡುಕಿಕೊಂಡು ನಾಲ್ಕೈದು ಜನ ಸೈನಿಕರು ಮುದುಕಿಯ ಮನೆಯ ಬಾಗಿಲನ್ನು ಬಡಿಯುತ್ತಾರೆ. ಆಗ ರಾಹಿಲನು ಬಾಗಿಲನ್ನು ತೆಗೆಯಬೇಡಿ ಎಂದು ಕೈ ಸನ್ನೆ ಮಾಡಿದಾಗ, ತನ್ನ ಸೊಸೆಯು ಮಲಗಿದ್ದ ಕೋಣೆಯ ಮಂಚದಡಿಗೆ ಕಳುಹಿಸಿ ನಂತರ ಬಾಗಿಲು ತೆರೆಯುತ್ತಾಳೆ. ಒಳನುಗ್ಗಿದ ಸೈನಿಕರು ಮುದುಕಿಯನ್ನು ಕುರಿತು, "ಯಾರಾದರೂ ಗಾಯಗೊಂಡ ಶತ್ರು ದೇಶದ ಸೈನಿಕರು ಈ ಕಡೆ ಬಂದಿದ್ದಾರೆಯೇ ?" ಎಂದು ಕೇಳಿದಾಗ ಯಾರು ಬಂದಿಲ್ಲ ಎಂದು ಹೇಳಿ ತನ್ನ ದೇಶದ ಸೈನಿಕರಿಂದ ರಾಹಿಲನನ್ನು ರಕ್ಷಿಸುತ್ತಾಳೆ. ತದನಂತರ ಒಂದೆರಡು ದಿನಗಳಲ್ಲಿ ಪರಸ್ಪರರಲ್ಲಿ ವಿಶ್ವಾಸ ಮೂಡಿ ಸುಖ-ದುಃಖಗಳನ್ನು ಹಂಚಿಕೊಂಡರು. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಪರಸ್ಪರ ಸಹಾಯ ಮಾಡಿದರು. | |
| 42. | ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.<br>***ಅಥವಾ***<br>ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.<br>***ಉತ್ತರ :***<br>ದುರ್ಯೋಧನನು ತನ್ನ ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಬಳಿಗೆ ಬಂದಾಗ ಭೀಷ್ಮರು ದುರ್ಯೋಧನನಿಗೆ ಸಲಹೆಯನ್ನು ನೀಡುತ್ತಾ, ನೀನು ಒಪ್ಪಿಕೊಳ್ಳುವುದಾದರೆ ಪಾಂಡವರನ್ನು ಒಪ್ಪಿಸಿ ಅವರೊಂದಿಗೆ ಸಂಧಿಯನ್ನು ಮಾಡಿ ಮೊದಲಿನಂತೆಯೇ ಅವರು ನಡೆಯುವ ಹಾಗೇ ಮಾಡುವೆನು. ಇನ್ನೂ ಅವರು ನಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತಾರೆ. ನನ್ನ ಮಾತನ್ನು ಮೀರುವವರಲ್ಲ. ನೀನು ಕೂಡ ನಾವು ಹೇಳಿದ್ದನ್ನು ಮೀರದೆ ನಡೆದುಕೊಳ್ಳಬೇಕು ಎಂದಾಗ, ದುರ್ಯೋಧನನು ಮುಗುಳ್ನಗೆ ನಕ್ಕು ಅಜ್ಜ, ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದವನ್ನು ಪಡೆದುಕೊಂಡು ಹೋಗಲೆಂದು ಬಂದೆನೇ ಹೊರತು ಆ ಶತ್ರುಗಳಾದ ಪಾಂಡವರೊಡನೆ ಒಪ್ಪಂದವನ್ನು ಏರ್ಪಡಿಸಲೆಂದು ಬರಲಿಲ್ಲ. ನಾಳಿನ ಸಮರದಲ್ಲಿ ನನ್ನ ಕೆಲಸ ಏನು ಹೇಳಿ ಎನ್ನುತ್ತಾ 'ನಾನು ಪಾಂಡವರೊಂದಿಗೆ ನೆಲಕ್ಕಾಗಿ ಹೋರಾಡುತ್ತಿಲ್ಲ ಛಲಕ್ಕಾಗಿ ಹೋರಾಡುತ್ತಿರುವೆನು.' ಈ ಭೂಮಿ ನನಗೆ ಪಾಳುಭೂಮಿ. ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ನಾನು ಮತ್ತೆ ಬಾಳುವುದುಂಟೇ ? ನನ್ನ ಪ್ರೀತಿಯ ಗೆಳೆಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕರ್ಣ, ನನ್ನ ಪ್ರೀತಿಯ ತಮ್ಮ ದುಶ್ಶಾಸನರನ್ನು ಕೊಂದ ಅರ್ಜುನ-ಭೀಮರು ಇರುವ ತನಕ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಅಜ್ಜ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದು ನಂತರ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ ? ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು, ಸತ್ತವರೇನು ಮತ್ತೆ ಹುಟ್ಟುವುದಿಲ್ಲ. ಆದ್ದರಿಂದ ಪಾಂಡವರೊಂದಿಗೆ ಹೋರಾಡಿ ಛಲವನ್ನೇ ಮೆರೆಯುವೆನು. ಅಜ್ಜ, ನಾನು ಪಾಂಡವರೊಂದಿಗೆ ಯುದ್ಧ ಮಾಡದೇ ಇರುವುದಿಲ್ಲ. ನಾಳಿನ ಸಮರದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡೆಯನಾಗಬೇಕು. ಆದ್ದರಿಂದ ನಾನು ಯುದ್ಧವನ್ನೇ ಮಾಡುವೆನು ಎಂದು ಹೇಳಿದನು.<br><br>**ಅಥವಾ**<br><br>ಛಲವನ್ನೇ ಮುಖ್ಯ ಗುಣವಾಗುಳ್ಳ ದುರ್ಯೋಧನ ಯುದ್ಧ ಮಾಡಿಯೇ ತೀರಬೇಕೆಂದು ನಿರ್ಧರಿಸಿದ್ದನು. ತಂದೆ-ತಾಯಿಯರ ಅಪೇಕ್ಷೆಯಂತೆ ಭೀಷ್ಮರ ಬಳಿಗೆ ಬಂದ ದುರ್ಯೋಧನನಿಗೆ ಸಂಧಿ ಮಾಡಿಕೊಳ್ಳುವಂತೆ ಭೀಷ್ಮರು ಸಲಹೆ ನೀಡುತ್ತಾರೆ. ತಾತ ಭೀಷ್ಮರ ಸಲಹೆಗೂ ಒಪ್ಪದ ದುರ್ಯೋಧನನ 'ಛಲದಗುಣ' ಅವನ ಸ್ವಭಾವಕ್ಕೆ ತಕ್ಕನಾಗಿ ವ್ಯಕ್ತಗೊಂಡಿದೆ. ಭೀಷ್ಮರ ಸಲಹೆಯನ್ನು ನಿರಾಕರಿಸಿ ಹೀಗೆ ಹೇಳುತ್ತಾನೆ. 'ಅಜ್ಜ, ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದವನ್ನು ಪಡೆದುಕೊಂಡು ಹೋಗಲೆಂದು ಬಂದಿದ್ದೇನೆಯೇ ಹೊರತು ಆ ಶತ್ರುಗಳಾದ ಪಾಂಡವರೊಡನೆ ಒಪ್ಪಂದವನ್ನು ಏರ್ಪಡಿಸೆಂದು ಕೇಳಲು ಬಂದಿಲ್ಲ. ನಾಳಿನ ಸಮರದಲ್ಲಿ ನನ್ನ ಕೆಲಸ ಏನು ಹೇಳಿ. ನಾನು ಪಾಂಡವರೊಂದಿಗೆ ನೆಲಕ್ಕಾಗಿ ಹೋರಾಡುತ್ತಿಲ್ಲ ಛಲಕ್ಕಾಗಿ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ನಾನು ಮತ್ತೆ ಬಾಳಲು ಸಾಧ್ಯವಿಲ್ಲ ? ನನ್ನ ಪ್ರೀತಿಯ ಗೆಳೆಯ ಕರ್ಣ, ಪ್ರೀತಿಯ ತಮ್ಮ ದುಶ್ಶಾಸನರನ್ನು ಕೊಂದ ಅರ್ಜುನ-ಭೀಮರು ಇರುವ ತನಕ ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದು ನಂತರ ಧರ್ಮರಾಯನೊಡನೆ ಸಂಧಿಗೆ ಒಪ್ಪುತ್ತೇನೆ. ಯುದ್ಧದ ಪರಿಣಾಮ ಸರ್ವನಾಶ ಎಂದು ತಿಳಿದಿದ್ದರೂ ಪಾಂಡವರೊಂದಿಗೆ ಹೋರಾಡಿ ಛಲವನ್ನೇ ಮೆರೆಯುವೆನು, ನಾಳಿನ ಸಮರದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡೆಯನಾಗಬೇಕು ಆದ್ದರಿಂದ ನಾನು ಯುದ್ಧವನ್ನೇ ಮಾಡುತ್ತೇನೆ ಎಂದು ಹೇಳುವ ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 1 × 4 = 4 ( 2 + 2 ) |
| 43. | ಸ್ವಾತಂತ್ರ್ಯ ನಂತರ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಭಾರತ ಕೂಡ ಸಹಿ ಹಾಕಿದ್ದರ ಪರಿಣಾಮ ಹಲವಾರು ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕಾಗಿ ಬಂತು. ಕೊರಿಯಾ, ಸೈಪ್ರಸ್, ಕಾಂಗೋ, ಜೈರ್, ಉಗಾಂಡಾ – ಹೀಗೆ ಹಲವು ರಾಷ್ಟ್ರಗಳಲ್ಲಿ ಭಾರತೀಯ ಸೈನಿಕರು ವಿಶ್ವಸಂಸ್ಥೆಯ ಭಾಗವಾಗಿ ಕೆಲಸ ಮಾಡಿದರು. ೧೯೬೧ ರ ಡಿಸೆಂಬರ್ ಕಾಂಗೋ ಕಾರ್ಯಾಚರಣೆಯಲ್ಲಿ ಗೂರ್ಖಾ ರೈಫಲ್ಸ್‌ನ ಕ್ಯಾಪ್ಟನ್ ಗುರುಬಚ್ಚನ್ ಸಿಂಗ್ ಸಲಾರಿಯಾ ಕಟಾಂಗದ ಎಲಿಜಬೆತ್ ವಿಲ್ಲೆಯಲ್ಲಿ ಕೇವಲ ಬಯೊನೆಟ್, ಕುಕ್ರಿ ಮತ್ತು ಗ್ರೆನೇಡ್‌ಗಳನ್ನು ಬಳಸಿ ೪೦ ವೈರಿ ಸೈನಿಕರನ್ನು ಹಾಗೂ ಅವರ ಎರಡು ವಾಹನಗಳನ್ನು ನಾಶ ಮಾಡಿ ವಿಶ್ವಸಂಸ್ಥೆಯ ಕಛೇರಿಗೆ ಬಂದಿದ್ದ ಅಪಾಯವನ್ನು ತಮ್ಮ ಪ್ರಾಣಾರ್ಪಣೆ ಮಾಡಿ ತಡೆದರು. ಈ ಮೂಲಕ ಭಾರತೀಯ ಯೋಧರ ಕರ್ತವ್ಯ ನಿಷ್ಠೆಯನ್ನು ಜಗತ್ತಿಗೆ ಸಾರಿ, ವಿದೇಶಿ ನೆಲದಲ್ಲಿ ಮರಣೋತ್ತರ ಪರಮವೀರಚಕ್ರ ಪ್ರಶಸ್ತಿ ಗಳಿಸಿದ ಮೊದಲಿಗರಾದರು.<br><br>ಸ್ವಾತಂತ್ರ್ಯ ನಂತರ ಭಾರತ ೧೯೬೫, ೧೯೭೧ ರಲ್ಲಿ ಪಾಕಿಸ್ತಾನದೊಡನೆ ಮತ್ತು ೧೯೬೨ ರಲ್ಲಿ ಚೀನಾದೊಡನೆ ಮೂರು ಯುದ್ಧಗಳಲ್ಲಿ ಭಾಗವಹಿಸಿತ್ತು. ಅಲ್ಲದೆ ಸಿಯಾಚಿನ್ ಪ್ರದೇಶದ ವಶಕ್ಕಾಗಿ ಆಪರೇಷನ್ ಮೇಘನಾದ್ (೧೯೮೪), ಕಾರ್ಗಿಲ್ ಕಾರ್ಯಾಚರಣೆಗೆ ಆಪರೇಷನ್ ವಿಜಯ (೧೯೯೯) ಇತ್ಯಾದಿ ಗಡಿ ತಂಟೆ ಹೋರಾಟಗಳನ್ನು ಎದುರಿಸಿತ್ತು.<br><br>*ಪ್ರಶ್ನೆಗಳು :*<br><br>ಅ) ವಿಶ್ವಸಂಸ್ಥೆಯ ಕಛೇರಿಗೆ ಬಂದಿದ್ದ ಅಪಾಯವನ್ನು ಕ್ಯಾಪ್ಟನ್ ಗುರುಬಚ್ಚನ್ ಸಿಂಗ್ ಹೇಗೆ ತಡೆದರು ?<br><br>ಬ) ಸ್ವಾತಂತ್ರ್ಯ ನಂತರ ಭಾರತೀಯ ಸೇನೆ ಸಾಧಿಸಿದ ವಿಜಯಗಳನ್ನು ಪಟ್ಟಿ ಮಾಡಿ ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :*<br>ಅ) ೧೯೬೧ ರ ಡಿಸೆಂಬರ್ ಕಾಂಗೋ ಕಾರ್ಯಾಚರಣೆಯಲ್ಲಿ ಗೂರ್ಖಾ ರೈಫಲ್ಸ್‌ನ ಕ್ಯಾಪ್ಟನ್ ಗುರುಬಚ್ಚನ್ ಸಿಂಗ್ ಸಲಾರಿಯಾ ಕಟಾಂಗದ ಎಲಿಜಬೆತ್ ವಿಲ್ಲೆಯಲ್ಲಿ ಕೇವಲ ಬಯೋನೆಟ್, ಕುಕ್ರಿ ಮತ್ತು ಗ್ರೆನೇಡ್‌ಗಳನ್ನು ಬಳಸಿ ೪೦ ವೈರಿ ಸೈನಿಕರನ್ನು ಹಾಗೂ ಅವರ ಎರಡು ವಾಹನಗಳನ್ನು ನಾಶ ಮಾಡಿ ವಿಶ್ವಸಂಸ್ಥೆಯ ಕಛೇರಿಗೆ ಬಂದಿದ್ದ ಅಪಾಯವನ್ನು ತಮ್ಮ ಪ್ರಾಣಾರ್ಪಣೆ ಮಾಡಿ ತಡೆದರು. ಈ ಮೂಲಕ ಭಾರತೀಯ ಯೋಧರ ಕರ್ತವ್ಯ ನಿಷ್ಠೆಯನ್ನು ಜಗತ್ತಿಗೆ ಸಾರಿ, ವಿದೇಶಿ ನೆಲದಲ್ಲಿ ಮರಣೋತ್ತರ ಪರಮವೀರಚಕ್ರ ಪ್ರಶಸ್ತಿ ಗಳಿಸಿದ ಮೊದಲಿಗರಾದರು.<br>ಬ) ಸ್ವಾತಂತ್ರ್ಯ ನಂತರ ಭಾರತ ೧೯೬೫, ೧೯೭೧ ರಲ್ಲಿ ಪಾಕಿಸ್ತಾನದೊಡನೆ ಮತ್ತು ೧೯೬೨ ರಲ್ಲಿ ಚೀನಾದೊಡನೆ ಮೂರು ಯುದ್ಧಗಳಲ್ಲಿ ಭಾಗವಹಿಸಿತ್ತು. ಅಲ್ಲದೆ ಸಿಯಾಚಿನ್ ಪ್ರದೇಶದ ವಶಕ್ಕಾಗಿ ಆಪರೇಷನ್ ಮೇಘನಾದ್ (೧೯೮೪), ಕಾರ್ಗಿಲ್ ಕಾರ್ಯಾಚರಣೆಗೆ ಆಪರೇಷನ್ ವಿಜಯ (೧೯೯೯) ಇತ್ಯಾದಿ ಗಡಿ ತಂಟೆ ಹೋರಾಟಗಳನ್ನು ಎದುರಿಸಿತ್ತು. ಇವು ಸ್ವಾತಂತ್ರ್ಯ ನಂತರ ಭಾರತೀಯ ಸೇನೆ ಸಾಧಿಸಿದ ವಿಜಯಗಳಾಗಿವೆ. | |
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 44. | ನಿಮ್ಮನ್ನು ಕೊಡಗಿನ ಸರ್ಕಾರಿ ಪ್ರೌಢಶಾಲೆಯ 'ಅಂಜಲಿ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರ ಹಾಗೂ ಅಂಕಪಟ್ಟಿಯನ್ನು ನೀಡುವಂತೆ ಕೋರಿ, ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ರಮೇಶ್' ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಅನುಮತಿ ಹಾಗೂ 3,000 ರೂ.ಗಳನ್ನು ಕಳುಹಿಸಿ ಕೊಡುವಂತೆ ಕೋರಿ, ಶಿವಮೊಗ್ಗದ ಕುವೆಂಪುನಗರದಲ್ಲಿ ವಾಸವಾಗಿರುವ 'ಬಸವರಾಜಪ್ಪ' ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ತಂದೆಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| XV. | **ಪ್ರಬಂಧ ಬರೆವಣಿಗೆ :** | 1 × 5 = 5 |
| 45. | ರಾಷ್ಟ್ರೀಯ ಹಬ್ಬಗಳ ಮಹತ್ವ | |
| | **ಅಥವಾ** | |
| | ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |